ಶತಕದತ್ತ ಓಟ... ತೊಂಬತ್ತರ ನೋಟ

skjanaraguru@gmail.com

ಸಂಯುಕ್ತ ಕರ್ನಾಟಕ

ಹದಿಹರೆಯದವರಿಗೆ ಅರಿವಿನ ಹರಿವು
ಜಾಣರ ಗುರು
ವಿದ್ಯಾರ್ಥಿ ಸಂಚಿಕೆ
ಬೆಲೆ ₹1

ಬೆಂಗಳೂರು । ಹುಬ್ಬಳ್ಳಿ । ಮಂಗಳೂರು । ಕಲಬುರಗಿ । ದಾವಣಗೆರೆ । ಬಾಗಲಕೋಟೆ । ಬೆಳಗಾವಿ ।

ಸೋಮವಾರ
4 ಮೇ 2026
ಪುಟ-08
ಸಂಪುಟ: 68
ಸಂಚಿಕೆ: 90

ಶುಭ ನುಡಿ
ಅಂಕಗಳಿಗಿಂತ ಮೌಲ್ಯಗಳಿಗೆ ಬೆಲೆ ಕೊಡಿ, ವ್ಯಕ್ತಿತ್ವವೇ ನಿಮ್ಮ ದೊಡ್ಡ ಆಸ್ತಿ.

ಓದು ಕ್ಲಿಕ್

2 ಬೆಂಬಿಡದ ಬೇತಾಳನಂತೆ ಬೆನ್ನತ್ತಿರುವ ಬಿಸಿಗಾಳಿ...
ಸ್ಪರ್ಧಾತ್ಮಕ ಪರೀಕ್ಷಾ ಮಾರ್ಗದರ್ಶಿ 6-7
4 ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನಾ ವಿಧಾನಗಳು
5 ವಿಸ್ತೃತ ದೃಷ್ಟಿಕೋನ: ಸಣ್ಣ ಅಡೆತಡೆಗಳನ್ನು ಮೀರಿ ಬೆಳೆಯುವ ವಿದ್ಯಾರ್ಥಿ ಜೀವನ
8 ಭಾರತದ ವೃದ್ಧಪಿತಾಮಹ ನವರೋಜಿ

AI ನಿಂದ ಹಿಡಿದು ರೊಬೊಟಿಕ್ಸ್ ವರೆಗಿನ ಉಚಿತ ಕೋರ್ಸ್‌ಗಳನ್ನು ಮನೆಯಿಂದಲೇ ಕಲಿಯುವ ಅವಕಾಶ

ಸ್ವಯಂ ವೆಬ್ ಮೂಲಕ ಉಚಿತ ಶಿಕ್ಷಣ ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ

ಭವಿಷ್ಯದ ಕೌಶಲ್ಯಗಳು ನಿಮ್ಮ ಕೈಯಲ್ಲಿ

▪ ರವಿ ಸಿ. ವಿಜಾಪೂರ

ಇಂದಿನ ಡಿಜಿಟಲ್ ಯುಗದಲ್ಲಿ ಶಿಕ್ಷಣವು ಕೇವಲ ತರಗತಿಗಳಿಗಷ್ಟೇ ಸೀಮಿತವಾಗಿಲ್ಲ. ಇಂಟರ್ನೆಟ್ ಮತ್ತು ತಂತ್ರಜ್ಞಾನಗಳ ಬೆಳವಣಿಗೆಯಿಂದಾಗಿ, ವಿದ್ಯಾರ್ಥಿಗಳು ಮತ್ತು ಉದ್ಯೋಗಾರ್ಹತೆ ಬೆಳೆಸಿಕೊಳ್ಳಲು ಬಯಸುವವರು ಮನೆಯಿಂದಲೇ ವಿಶ್ವಮಟ್ಟದ ಶಿಕ್ಷಣವನ್ನು ಪಡೆಯಬಹುದಾಗಿದೆ. ವಿಶೇಷವಾಗಿ ಎಐ (Artificial Intelligence), ಮೆಷಿನ್ ಲರ್ನಿಂಗ್, ಡೇಟಾ ಸೈನ್ಸ್ ಮತ್ತು ರೊಬೋಟಿಕ್ಸ್ ಮುಂತಾದ ಕ್ಷೇತ್ರಗಳು ಭವಿಷ್ಯದ ಪ್ರಮುಖ ಕೌಶಲ್ಯಗಳಾಗಿವೆ. ಈ ಕ್ಷೇತ್ರಗಳಲ್ಲಿ ಪರಿಣತಿ ಹೊಂದಿದವರಿಗೆ ಉದ್ಯೋಗಾವಕಾಶಗಳು ಅಪಾರವಾಗಿವೆ.

ತಂತ್ರಜ್ಞಾನ ನಿರಂತರವಾಗಿ ವಿಕಸನಗೊಳ್ಳುತ್ತಿರುವ ಇಂದಿನ ಕಠಿಣ ಸ್ಪರ್ಧೆಯಲ್ಲಿ, ಕಾಲಕ್ಕೆ ತಕ್ಕಂತೆ ಹೊಂದಿಕೊಳ್ಳುವುದು ಹವ್ಯಾಸಕ್ಕಿಂತ ಹೆಚ್ಚಾಗಿ ಅಗತ್ಯವಾಗಿದೆ. ನಿಮ್ಮ ವೃತ್ತಿಜೀವನದಲ್ಲಿ ನೀವು ನಿಶ್ಚಲತೆಯನ್ನು ಅನುಭವಿಸುತ್ತಿದ್ದರೆ ಅಥವಾ ಹೊಸ ಕೌಶಲ್ಯಗಳನ್ನು ಕಲಿಯುವ ಮೂಲಕ ಪ್ರಮುಖ ಕಂಪನಿಗಳಲ್ಲಿ ಉದ್ಯೋಗ ಪಡೆಯುವ ಕನಸು ಕಾಣುತ್ತಿದ್ದರೆ, ನಿಮಗಾಗಿ ಉತ್ತಮ ಅವಕಾಶ ಬಂದಿದೆ. ಈ ಹಿನ್ನೆಲೆಯಲ್ಲಿ, "SWAYAM" ಎಂಬ ಭಾರತೀಯ ಸರ್ಕಾರದ ಮಹತ್ವದ ವೇದಿಕೆ ಉಚಿತ ಆನ್‌ಲೈನ್ ಕೋರ್ಸ್‌ಗಳನ್ನು ನೀಡುತ್ತಿದೆ. SWAYAM (Study Webs of Active Learning for Young Aspiring Minds) ಎಂಬ ಈ ವೇದಿಕೆ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಉದ್ಯೋಗಾನ್ವೇಷಕರಿಗೆ ಬಹಳ ಉಪಯುಕ್ತವಾಗಿದೆ.

ಇಲ್ಲಿ ಗಮನಿಸಬೇಕಾದ ಮಹತ್ವದ ಅಂಶವೆಂದರೆ, ಈ ಕಲಿಕೆಯ ಪ್ರಕ್ರಿಯೆಯು ವಯಸ್ಸು ಮತ್ತು ಆರ್ಥಿಕ ನಿರ್ಬಂಧಗಳಿಂದ ಮುಕ್ತವಾಗಿದೆ. ನೀವು ವಿದ್ಯಾರ್ಥಿಯಾಗಿರಲಿ, ಕಂಪನಿಯಲ್ಲಿ ಕೆಲಸ ಮಾಡುವ ವೃತ್ತಿಪರರಾಗಿರಲಿ ಅಥವಾ ಹೊಸ ವಿಷಯಗಳನ್ನು ಕಲಿಯುವ ಉತ್ಸಾಹ ಹೊಂದಿರುವ ವ್ಯಕ್ತಿಯಾಗಿರಲಿ, ಪ್ರತಿಯೊಬ್ಬರೂ ಕಲಿಕೆಗಾಗಿ ಈ ವೇದಿಕೆಯನ್ನು ಬಳಸಬಹುದಾಗಿದೆ.

'ಸ್ವಯಂ'ನ ವಿಶೇಷತೆ ಏನು?

SWAYAM ಒಂದು MOOCs (Massive Open Online Courses) ವೇದಿಕೆ. ಇದು ಭಾರತ ಸರ್ಕಾರದ ಶಿಕ್ಷಣ ಸಚಿವಾಲಯದಿಂದ ಅಭಿವೃದ್ಧಿಪಡಿಸಲ್ಪಟ್ಟಿದೆ. ಇಲ್ಲಿ 9ನೇ ತರಗತಿಯಿಂದ ಪಿಜಿ ಮಟ್ಟದವರೆಗೆ ಸಾವಿರಾರು ಕೋರ್ಸ್‌ಗಳು ಲಭ್ಯವಿವೆ. 'ಸ್ವಯಂ' ಪೋರ್ಟಲ್‌ನ ಅತಿದೊಡ್ಡ ಪ್ರಯೋಜನವೆಂದರೆ ಅದು ದೇಶದ ಉನ್ನತ ಸಂಸ್ಥೆಗಳ ಪ್ರಖ್ಯಾತ ಪ್ರಾಧ್ಯಾಪಕರಿಂದ ವೀಡಿಯೊ ಉಪನ್ಯಾಸಗಳಿಗೆ ಪ್ರವೇಶವನ್ನು ಒದಗಿಸುತ್ತದೆ. ಇದರರ್ಥ ಬೋಧನೆಯ ಮಟ್ಟವು ವಿಶ್ವ ದರ್ಜೆಯದ್ದಾಗಿರುತ್ತದೆ. ಇಲ್ಲಿ ದಾಖಲಾತಿ ಮತ್ತು ಅಧ್ಯಯನವು ಸಂಪೂರ್ಣವಾಗಿ ಉಚಿತವಾಗಿರುತ್ತದೆ. ಆದಾಗ್ಯೂ, ಕೋರ್ಸ್ ಮುಗಿದ ನಂತರ ನಿಮ್ಮ ಸಿವಿಯಲ್ಲಿ ಸೇರಿಸಲು ಮಾನ್ಯ ಪ್ರಮಾಣಪತ್ರವನ್ನು ನೀವು ಬಯಸಿದರೆ, ನೀವು ಶುಲ್ಕವನ್ನು ಪಾವತಿಸಿ ಪರೀಕ್ಷೆಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಉದ್ಯೋಗ ಸಂದರ್ಶನಗಳಲ್ಲಿ ಈ ಪ್ರಮಾಣಪತ್ರವು ತುಂಬಾ ಸಹಾಯಕವಾಗಬಹುದು.



ಯಾವ ವಿಷಯಗಳಲ್ಲಿ ಕೋರ್ಸ್‌ಗಳು ಲಭ್ಯ?

- ಎಐ (Artificial Intelligence)
- ಮೆಷಿನ್ ಲರ್ನಿಂಗ್
- ಡೇಟಾ ಸೈನ್ಸ್
- ರೊಬೋಟಿಕ್ಸ್
- ಕಂಪ್ಯೂಟರ್ ಸೈನ್ಸ್
- ಇಂಜಿನಿಯರಿಂಗ್
- ಮ್ಯಾನೇಜ್‌ಮೆಂಟ್
- ಮಾನವಿಕ ಶಾಸ್ತ್ರಗಳು
- ಇವುಗಳಲ್ಲಿ ವಿಶೇಷವಾಗಿ ಎಐ ಮತ್ತು ರೊಬೋಟಿಕ್ಸ್ ಕೋರ್ಸ್‌ಗಳು ಈಗಿನ ಉದ್ಯೋಗ ಮಾರುಕಟ್ಟೆಯಲ್ಲಿ ಹೆಚ್ಚು ಬೇಡಿಕೆಯಲ್ಲಿವೆ.

ಪ್ರಮುಖ ಕೋರ್ಸ್‌ಗಳ ಮಾಹಿತಿ

AI ಫಾರ್ ಡೈಲಿ ಪ್ರೊಡಕ್ಟಿವಿಟಿ

ಕೃತಕ ಬುದ್ಧಿಮತ್ತೆ (AI) ಇಂದು ಒಂದು ಹಾಟ್ ವಿಷಯವಾಗಿದೆ. ಫ್ಲೇಮ್ ವಿಶ್ವವಿದ್ಯಾಲಯ ಮತ್ತು ಉದ್ಯಮ ತಜ್ಞರ ಸಹಾಯದಿಂದ ಅಭಿವೃದ್ಧಿಪಡಿಸಲಾದ ಈ ಕೋರ್ಸ್, ತಮ್ಮ ದೈನಂದಿನ ಕೆಲಸಗಳನ್ನು ಸರಳೀಕರಿಸಲು ಮತ್ತು ವೇಗಗೊಳಿಸಲು ಎಐ ಅನ್ನು ಬಳಸಲು ಬಯಸುವವರಿಗಾಗಿ ಅಭಿವೃದ್ಧಿಪಡಿಸಲಾಗಿದೆ. ನಾಲ್ಕು ಭಾಗಗಳಾಗಿ ವಿಂಗಡಿಸಲಾದ ಈ ಕೋರ್ಸ್, ಪ್ರಾಂಪ್ಟ್ ಇಂಜಿನಿಯರಿಂಗ್‌ನಿಂದ ಹಿಡಿದು ಎಐ ಪರಿಕರಗಳನ್ನು ಬಳಸುವವರೆಗೆ ಮೂಲಭೂತ ಅಂಶಗಳನ್ನು ಕಲಿಸುತ್ತದೆ. ನಿಮಗೆ ಎಐನ ಎಬಿಸಿಡಿಗಳು ತಿಳಿದಿಲ್ಲದಿದ್ದರೂ ಸಹ, ಮುಕ್ತವಾಗಿ ಸೇರಬಹುದಾಗಿದೆ.

ಸಿ ಮತ್ತು ಸಿ++

C ಮತ್ತು C++ ಅನ್ನು ಸಾಫ್ಟ್‌ವೇರ್ ಜಗತ್ತಿನಲ್ಲಿ ಕೋಡಿಂಗ್ ಅಡಿಪಾಯವೆಂದು ಪರಿಗಣಿಸಲಾಗಿದೆ. ಐಐಟಿ ಬಾಂಬೆಯ ಪ್ರೊಫೆಸರ್ ಕಣ್ಣನ್ ಮೌಲ್ಯ ಅವರು ರಚಿಸಿದ ಈ ಕೋರ್ಸ್, 20 ಆಡಿಯೋ ಮತ್ತು ವಿಡಿಯೋ ಟ್ಯುಟೋರಿಯಲ್‌ಗಳನ್ನು ಒಳಗೊಂಡಿದೆ. ಇದು 'ಸ್ವಯಂ' ಅಧ್ಯಯನದ ಮೂಲಕ ಸಿ ಮತ್ತು ಸಿ++ (ತರಗತಿಗಳು, ಆನುವಂಶಿಕತೆ ಮತ್ತು ಬಹುರೂಪತೆಯಂತಹ ವೈಶಿಷ್ಟ್ಯಗಳನ್ನು ಒಳಗೊಂಡಂತೆ) ಆಳವಾದ ತಿಳಿವಳಿಕೆಯನ್ನು ನೀಡುತ್ತದೆ. ಶಾಲಾ ಮಕ್ಕಳಿಂದ ಕಾಲೇಜು ವಿದ್ಯಾರ್ಥಿಗಳವರೆಗೆ ಎಲ್ಲರಿಗೂ ಇದು ಉತ್ತಮ ಆರಂಭಿಕ ಹಂತವಾಗಿದೆ.

ಸುಧಾರಿತ ರೊಬೊಟಿಕ್ಸ್

ಯಂತ್ರಗಳು ಇನ್ನು ಮುಂದೆ ಕಾರ್ಖಾನೆಗಳಿಗೆ ಸೀಮಿತವಾಗಿಲ್ಲ; ಅವು ನಮ್ಮ ಜೀವನದ ಭಾಗವಾಗುತ್ತಿವೆ. ಐಐಟಿ ಕಾನ್ಪುರದ ಪ್ರಾಧ್ಯಾಪಕ ಆಶಿಶ್ ದತ್ತಾ ಅವರು NPTEL ನಲ್ಲಿ ನಡೆಸುತ್ತಿರುವ ಈ 'ಎರಡನೇ ಹಂತದ' ಕೋರ್ಸ್, ರೊಬೊಟಿಕ್ಸ್ (ವಿಶೇಷವಾಗಿ ಗಣಿತ) ಬಗ್ಗೆ ಸ್ವಲ್ಪ ಪೂರ್ವ ಜ್ಞಾನ ಹೊಂದಿರುವವರನ್ನು ಗುರಿಯಾಗಿರಿಸಿಕೊಂಡಿದೆ. ಇದು ಚಲನಶಾಸ್ತ್ರ, ಸಂವೇದಕಗಳು, ಆಕ್ಟಿವೇಟರ್‌ಗಳು ಮತ್ತು ಬೈಪ್ಡ್ ನಡಿಗೆ ವಿನ್ಯಾಸದಂತಹ ಮುಂದುವರಿದ ಅಂಶಗಳನ್ನು ಒಳಗೊಂಡಿದೆ.

ಬ್ಲಾಕ್‌ಚೈನ್ ಮತ್ತು ಅದರ ಅನ್ವಯಿಕೆಗಳು

ಐಐಟಿ ಖರಗ್‌ಪುರದ ಪ್ರೊಫೆಸರ್ ಸಂದೀಪ್ ಚಕ್ರವರ್ತಿ ಮತ್ತು ಪ್ರೊಫೆಸರ್ ಶಮಿಕ್ ಸುರಲ್ ನೇತೃತ್ವದ ಈ 12 ವಾರಗಳ ಕೋರ್ಸ್, ಬ್ಲಾಕ್‌ಚೈನ್‌ನ ನಿಗೂಢ ಜಗತ್ತಿಗೆ ನಿಮ್ಮನ್ನು ಪರಿಚಯಿಸುತ್ತದೆ. ಇದು ಡಿಜಿಟಲ್ ಸಿಗ್ನೇಚರ್‌ಗಳು, ಹ್ಯಾಶ್ ಕೋರ್ಸ್‌ಗಳು ಮತ್ತು ಎಥೆರಿಯಮ್‌ನಂತಹ ಪ್ಲಾಟ್‌ಫಾರ್ಮ್‌ಗಳೊಂದಿಗೆ ಪ್ರಾಯೋಗಿಕ ಅನುಭವವನ್ನು ಒದಗಿಸುತ್ತದೆ. ಪ್ರಸ್ತುತ ಡೇಟಾ ಭದ್ರತಾ ಸವಾಲುಗಳನ್ನು ಗಮನಿಸಿದರೆ ಈ ಕೋರ್ಸ್ ಮಾರುಕಟ್ಟೆಯಲ್ಲಿ ನಿಮ್ಮನ್ನು ಗಮನಾರ್ಹವಾಗಿ ಮುನ್ನಡೆಸಬಹುದು.



ಕ್ಲೌಡ್ ಕಂಪ್ಯೂಟಿಂಗ್

ಇಂಟರ್ನೆಟ್ ಜಗತ್ತು ಈಗ ಹಾರ್ಡ್ ಡ್ರೈವ್‌ಗಳಿಂದ ಕ್ಲೌಡ್‌ಗೆ ಸ್ಥಳಾಂತರಗೊಂಡಿದೆ. ಐಐಟಿ ಖರಗ್‌ಪುರದ ಪ್ರಾಧ್ಯಾಪಕಿ ಸೌಮ್ಯ ಕಾಂತಿ ಘೋಷ್ ಅವರು ಕಲಿಸುವ ಈ 12 ವಾರಗಳ ಕೋರ್ಸ್ ಕಂಪ್ಯೂಟರ್ ವಿಜ್ಞಾನ ಮತ್ತು ಎಲೆಕ್ಟ್ರಾನಿಕ್ಸ್ ವಿದ್ಯಾರ್ಥಿಗಳಿಗೆ ಒಂದು ನಿಧಿಯಾಗಿದೆ. ಇದು ಕ್ಲೌಡ್ ಆರ್ಕಿಟೆಕ್ಚರ್, ಡೇಟಾ ಹ್ಯಾಂಡ್ಲಿಂಗ್ ಮತ್ತು ಸರ್ವರ್‌ಲೆಸ್ ಕಂಪ್ಯೂಟಿಂಗ್‌ನಂತಹ ಸುಧಾರಿತ ತಂತ್ರಜ್ಞಾನಗಳನ್ನು ನಿಮಗೆ ಕಲಿಸುತ್ತದೆ.

ಉಚಿತ ಕೋರ್ಸ್‌ಗಳ ವಿಶೇಷತೆಗಳು

- **ಉಚಿತ ಪ್ರವೇಶ:** ಹೆಚ್ಚಿನ ಕೋರ್ಸ್‌ಗಳು ಉಚಿತವಾಗಿವೆ.
- **ವಿಶ್ವಮಟ್ಟದ ಶಿಕ್ಷಕರು:** IITs, IIMs ಮತ್ತು ಪ್ರಮುಖ ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರಿಂದ ಬೋಧನೆ
- **ಸ್ವಯಂ ವೇಗದಲ್ಲಿ ಕಲಿಕೆ:** ನಿಮ್ಮ ಸಮಯಕ್ಕೆ ಅನುಗುಣವಾಗಿ ಕಲಿಯಬಹುದು.
- **ಪ್ರಮಾಣಪತ್ರ:** ಕೆಲವು ಕೋರ್ಸ್‌ಗಳಿಗೆ ಪರೀಕ್ಷೆಯ ಮೂಲಕ ಪ್ರಮಾಣಪತ್ರ ಪಡೆಯಬಹುದು.

ಯಾರು ಬಳಸಬಹುದು?

- ವಿದ್ಯಾರ್ಥಿಗಳು
- ಉದ್ಯೋಗಾನ್ವೇಷಕರು
- ಕೆಲಸ ಮಾಡುತ್ತಿರುವ ವೃತ್ತಿಪರರು
- ಹೊಸ ಕೌಶಲ್ಯ ಕಲಿಯಲು ಬಯಸುವ ಯಾರಾದರೂ

ಹೇಗೆ ನೋಂದಣಿ ಮಾಡುವುದು?

- 'ಸ್ವಯಂ' ವೆಬ್‌ಸೈಟ್‌ಗೆ ಭೇಟಿ ನೀಡಿ
- ಖಾತೆ ರಚಿಸಿ
- ನಿಮ್ಮ ಆಸಕ್ತಿಯ ಕೋರ್ಸ್ ಆಯ್ಕೆ ಮಾಡಿ
- ಕಲಿಕೆಯನ್ನು ಪ್ರಾರಂಭಿಸಿ

ಏಕೆ ಎಐ ಮತ್ತು ರೊಬೋಟಿಕ್ಸ್ ಕಲಿಯಬೇಕು?

ಡಿಜಿಟಲ್ ಯುಗದಲ್ಲಿ ಕಲಿಕೆಯ ಮಾರ್ಗಗಳು ಬಹಳ ಸುಲಭವಾಗಿವೆ. ಎಐ ಮತ್ತು ರೊಬೋಟಿಕ್ಸ್ ಕ್ಷೇತ್ರಗಳು ಭವಿಷ್ಯದ ತಂತ್ರಜ್ಞಾನವನ್ನು ರೂಪಿಸುತ್ತಿವೆ. ಆರೋಗ್ಯ, ಕೃಷಿ, ಬ್ಯಾಂಕಿಂಗ್, ಶಿಕ್ಷಣ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಇದರ ಬಳಕೆ ಹೆಚ್ಚುತ್ತಿದೆ. ಈ ಕೌಶಲ್ಯಗಳನ್ನು ಕಲಿತವರು ಉತ್ತಮ ಉದ್ಯೋಗಾವಕಾಶಗಳನ್ನು ಪಡೆಯಬಹುದು. ಒಟ್ಟಾರೆಯಾಗಿ, ಸ್ವಯಂ ಪೋರ್ಟಲ್ ಭಾರತದಲ್ಲಿ ಡಿಜಿಟಲ್ ಶಿಕ್ಷಣ ಕ್ರಾಂತಿಯಾಗಿದ್ದು, ದೇಶದ ಮೂಲೆ ಮೂಲೆಗೂ ಜ್ಞಾನವನ್ನು ತರುತ್ತದೆ. ಈ ಕೋರ್ಸ್‌ಗಳು ಮನೆಯಿಂದಲೇ ಲಕ್ಷಾಂತರ ರೂಪಾಯಿ ವೆಚ್ಚದ ಕೌಶಲ್ಯಗಳನ್ನು ಪಡೆಯಲು ನಿಮಗೆ ಅವಕಾಶ ಮಾಡಿಕೊಡುತ್ತವೆ. ಈ ವೇದಿಕೆ ವಿದ್ಯಾರ್ಥಿಗಳಿಗೆ ಮತ್ತು ವೃತ್ತಿಪರರಿಗೆ ಉಚಿತವಾಗಿ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಿದೆ. ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡು ನಿಮ್ಮ ಭವಿಷ್ಯವನ್ನು ಉಜ್ವಲಗೊಳಿಸಬಹುದಾಗಿದೆ.

" Hot wave opens the skull of a city, exposing its white brain and its heart of nerves, which sizzle like wires inside a light bulb .And there excludes a sour extra human smell that makes every stone seem flesh - alive ,webbed and pulsing.."

▪ **Buzz Ferol**

ಬೆಂಬಿಡದ ಬೇತಾಳನಂತೆ ಬೆನ್ನತ್ತಿರುವ ಬಿಸಿಗಾಳಿ...

▪ **ಡಾ. ಕರವೀರಪ್ರಭು ಕ್ಯಾಲಕೊಂಡ**

ಬಿಸಿಗಾಳಿ ಭೂಕಂಪದಂತೆ ಮನೆಮಾರು ಕೆಡವುದಿಲ್ಲ. ಸುನಾಮಿಯಂತೆ ಧ್ವಂಸ ಮಾಡಿ ಕಣ್ಣೀರು ಹರಿಸುವುದಿಲ್ಲ. ಆದರೆ, ಜನ ತತ್ತರಿಸಿ ಬೊಬ್ಬೆ ಇಡುವುದನ್ನು ಬಿಡುವುದಿಲ್ಲ. ಬೇಸಿಗೆಯಲ್ಲಿ ಬಾನಿನಲ್ಲಿ ಕೆಂಡ ಕಾರುವ ಸೂರ್ಯ. ಧರೆಯಲ್ಲಿ ದಾಹ. ಸಹಿಸಲಾರದ ಶೆಕೆ. ಸಾಯುವ ಸಂಕಟ. ಉರಿಯ ವರ್ತುಲದೊಳಗೆ ಬದುಕು ಗಿರಕಿ ಹೊಡೆಯುತ್ತದೆ. ಈ ವರ್ಷ ಬೇಸಿಗೆಯ ಬೇಗೆ ಕಲ್ಪನಾತೀತ ಮಟ್ಟಕ್ಕೆ ಮುಟ್ಟಿದೆ. ಸ್ವಲ್ಪ ದಿನ ಕಳೆದರೆ ಮನೆ ಒಳಗೂ ಇರಲಾರದೆ, ಹೊರಗೂ ಹೋಗಲಾರದಂತಹ ಪರಿಸ್ಥಿತಿ ಉಂಟಾಗುತ್ತದೆ.

ದೆಹಲಿ, ಹರಿಯಾಣ, ಪಂಜಾಬ್... ಉತ್ತರ ಭಾರತದಲ್ಲಿ ಬಿಸಿಗಾಳಿ ಕಣ್ಣುಮುಚ್ಚಾಲೆ ಆಟವಾಡುತ್ತಿದೆ. ಬಿಸಿಲಿನ ಬೇಗೆಯಿಂದ ಬಳಲಿ ಬೆಂಡಾಗಿ ಬಸವಳಿದು ಬಿದ್ದವರ ಸುದ್ದಿಗಳನ್ನು ಪತ್ರಿಕೆಗಳಲ್ಲಿ ಓದಿ, ವಾರ್ತೆಯಲ್ಲಿ ಕೇಳಿ, ದೂರದರ್ಶನದಲ್ಲಿ ನೋಡಿ ಬೆಚ್ಚಿಬೀಳುತ್ತೇವೆ. ಅಪರೂಪಕ್ಕೆ ಬಿತ್ತರಗೊಳ್ಳುವ ಸತ್ತವರ ಸುದ್ದಿಗಳು ಬರಸಿಡಿಲಿನಂತೆ ಎರಗುತ್ತವೆ. ವಿಜ್ಞಾನಿಗಳ ಮಿದುಳಿಗೆ ಮೇವನ್ನು ಒದಗಿಸುತ್ತವೆ.

ಮಾನವನು ಉಷ್ಣಾಂಶವನ್ನು ಎಷ್ಟರಮಟ್ಟಿಗೆ ಸಹಿಸಬಲ್ಲನು? ಎನ್ನುವುದರ ಬಗ್ಗೆ ಅನೇಕ ಸಂಶೋಧನೆಗಳು, ಅಧ್ಯಯನಗಳು ಅವ್ಯಾಹತವಾಗಿ ನಡೆದಿವೆ. ಮರುಭೂಮಿಯಲ್ಲಿ ವಾಸಿಸುವ ಜನರನ್ನು ಅಭ್ಯಸಿಸಿ ಅನೇಕ ಮಾಹಿತಿಗಳನ್ನು ಕಲೆ ಹಾಕಿದ್ದಾರೆ. ವಿಜ್ಞಾನಿಗಳು ವಿಶ್ಲೇಷಿಸಿದ್ದಾರೆ. ಅಮೆರಿಕದ ಡಾ. ನ್ಯೂಬರ್ಗ್ ಈ ಕ್ಷೇತ್ರದ ಸಂಶೋಧನೆಯಲ್ಲಿ ಅಗ್ರಗಣ್ಯರು. ಶರೀರವು ನಾವು ಸಾಮಾನ್ಯವಾಗಿ ಎಣಿಸುವುದಕ್ಕಿಂತ ಹೆಚ್ಚು ಪಟ್ಟು ಉಷ್ಣಾಂಶವನ್ನು ತಡೆದುಕೊಳ್ಳುವ ತಾಕತ್ತು ಹೊಂದಿದೆ ಎಂಬುದು ಅವರ ಅಭಿಪ್ರಾಯ.

ಬಿಸಿಗಾಳಿ ಎಂದರೇನು?

ಉಷ್ಣಾಂಶ ಸಹಿಸಿಕೊಳ್ಳುವ ಮಿತಿಯನ್ನು ಮೀರಿದ ಅಸಾಮಾನ್ಯ ಉಷ್ಣ ವಾತಾವರಣಕ್ಕೆ ಬಿಸಿಗಾಳಿ (Heatwave) ಎನ್ನುತ್ತಾರೆ. ಸಾಮಾನ್ಯವಾಗಿ ಎರಡು ದಿನಗಳವರೆಗಿದ್ದು, ಅಪರೂಪಕ್ಕೆ ತಿಂಗಳವರೆಗೂ ವಿಸ್ತಾರಗೊಳ್ಳಬಹುದಾಗಿದೆ. ಇನ್ನೊಂದು ವ್ಯಾಖ್ಯಾನದ ಪ್ರಕಾರ, ಐದು ದಿನಗಳ ನಿರಂತರ ಉಷ್ಣಾಂಶ ಸಾಮಾನ್ಯ ಸರಾಸರಿ ಉಷ್ಣಾಂಶಕ್ಕಿಂತ 5 ಡಿಗ್ರಿ ಸೆಂಟಿಗ್ರೇಡ್ ಹೆಚ್ಚಾಗಿದ್ದರೆ ಅದಕ್ಕೆ ಬಿಸಿಗಾಳಿ ಎನ್ನುತ್ತಾರೆ. ಉಷ್ಣಾಂಶ ಸಹಿಸಿಕೊಳ್ಳುವ ಮಿತಿ ದೇಶದಿಂದ ದೇಶಕ್ಕೆ ಭಿನ್ನವಾಗಿರುತ್ತದೆ. ಯುರೋಪ್ ರಾಷ್ಟ್ರಗಳಲ್ಲಿ ಇದು 25 ಡಿಗ್ರಿ ಸೆಂ.ಕ್ಕೆ ಸೀಮಿತವಾಗಿದ್ದರೆ, ಅಮೆರಿಕದಲ್ಲಿ 32.2 ಡಿಗ್ರಿ ಸೆಂ. ಇರುತ್ತದೆ. ಕ್ಯಾಲಿಫೋರ್ನಿಯಾದಲ್ಲಿ 37.8 ಡಿಗ್ರಿ ಸೆಂ. ಮತ್ತು ದಕ್ಷಿಣ ಆಫ್ರಿಕಾದಲ್ಲಿ 35 ಡಿಗ್ರಿ ಸೆಂ. ನಮ್ಮ ದೇಶದಲ್ಲಿ 40 ಡಿಗ್ರಿ ಸೆಂ. ಇರುತ್ತದೆ.

ಅಪಾಯದ ಅಂಚಿನಲ್ಲಿರುವವರು

1. ವಯಸ್ಕರು, ಅದರಲ್ಲೂ 75 ವರ್ಷಕ್ಕಿಂತ ಮೇಲ್ಪಟ್ಟವರು, ಮಹಿಳೆಯರು ಮತ್ತು ಮಕ್ಕಳು.
2. ದೀರ್ಘಕಾಲಿಕ ಕಾಯಿಲೆಗಳ ಕರಿನೆರಳಿನಲ್ಲಿ ಕಾಲನೂಕುವವರು ಹೃದ್ರೋಗ ಮತ್ತು ಉಸಿರಾಟ ತೊಂದರೆಗಳಿಂದ ಬಳಲುತ್ತಿರುವವರು. ಮಾನಸಿಕ ಸಮಸ್ಯೆ, ಡಯಾಬೆಟಿಸ್, ಮೂತ್ರಪಿಂಡದ ಕಾಯಿಲೆ, ಪಾರ್ಕಿನ್ ಸನ್ ಕಾಯಿಲೆಗಳ ಕಪಿ ಮುಷ್ಟಿಯಲ್ಲಿರುವವರು.
3. ಬಹಳಷ್ಟು ಔಷಧಿ (Multiple drugs) ಸೇವಿಸುತ್ತಿರುವವರು. ಮಾದಕ ವಸ್ತುಗಳ ವ್ಯಸನಿಗಳು, ಮದ್ಯಪಾನ ಗುಲಾಮರು, ಅಲ್ಜೆಮರ್ಸ್ ನಿಂದ ಬಳಲುವವರು. ಬಹಳಷ್ಟು ಸಮಯ ಮನೆ ಹೊರಗಿದ್ದು ಸುಡು ಸುಡು ಬಿಸಿಲಿನಲ್ಲಿ ದುಡಿಯುವವರು, ನಿರ್ಗತಿಕರು ಇತ್ಯಾದಿ...

ಬಿಸಿಗಾಳಿ ಬೇಗೆಯ ಬಗೆಗಳು

ಬಿಸಿಗಾಳಿಯಿಂದ ಬಿಸಿಲಿನ ಬಳಲಿಕೆ, ಸೂರ್ಯಾಘಾತ, ಉಷ್ಣಾಘಾತ, ಸ್ನಾಯು ಸೆಳೆತ, ಚರ್ಮದ ದದ್ದುಗಳು ಕಂಡುಬರುವವು. ಇವುಗಳಿಂದ ರಕ್ಷಿಸಿಕೊಳ್ಳಬೇಕು. ಅಲಕ್ಷ್ಯ ಅನಾಹುತಗಳಿಗೆ ಆಹ್ವಾನ ನೀಡುವುದು. ಸಾವು–ನೋವುಗಳನ್ನು ಸ್ವಾಗತಿಸುವುದು. ಅನಾಹುತಗಳಾಗುವುದನ್ನು ತಪ್ಪಿಸಲು ಜನರಲ್ಲಿ ಅರಿವು ಮೂಡಿಸಿ, ಸಾಮೂಹಿಕ ಜನಜಾಗೃತಿ ಮೂಡಿಸುವುದು ಅವಶ್ಯಕ. ಶಾಖದ ಬಳಲಿಕೆ (Heat exhaustion), ಸ್ನಾಯು ಸೆಳೆತ (Heat cramps), ಚರ್ಮ ದದ್ದುಗಳು (Heat rash), ಸೂರ್ಯಾಘಾತ (Sun stroke) ಮತ್ತು ಉಷ್ಣಾಘಾತ (Heat stroke), ಬಿಸಿಲಿಗೆ ಮೈ ಸುಡುವುದು (Sun burn). ಈ ಸಮಸ್ಯೆಗಳನ್ನು ಜನರು ಎದುರಿಸಬೇಕಾಗಬಹುದು.

ಬಿಸಿ ಮತ್ತು ಆರ್ದ್ರತೆಯ ವಾತಾವರಣದಲ್ಲಿ ದೀರ್ಘಕಾಲಿಕವಾಗಿ ಇದ್ದರೆ ಬಿಸಿಲಿನ ಬಳಲಿಕೆಗೆ ಈಡಾಗಬಹುದು. ಇಲ್ಲಿ ರೋಗಿ ಸ್ಥಿತಪ್ರಜ್ಞನಾಗಿರುತ್ತಾನೆ. ಕೈಕಾಲು ಬಳಬಳ ಎನ್ನುವವು. ಅಶಕ್ತತೆಯಿಂದ ಜೋಲಿ ಹೊಡೆಯಬಹುದು. ಮುಖ ಬಿಳಚಿಕೊಳ್ಳುವುದು. ಸುರಿಯುವ ಬೆವರಿನಿಂದ ಚರ್ಮವು ತಂಪಾಗಿದ್ದು ಜಿಡ್ಡುಗಟ್ಟಿರುವುದು. ಉಸಿರುಗಟ್ಟಿದ ವಾತಾವರಣದ ಬಿಸಿ ಕೋಣೆಯಲ್ಲಿ ಕೆಲಸ ಮಾಡುವ ಕಾರ್ಮಿಕರು ಇದಕ್ಕೆ ತುತ್ತಾಗುವ ಸಂಭವ ಹೆಚ್ಚು.

ಸೂರ್ಯನ ಪ್ರಖರ ಕಿರಣಗಳಿಗೆ ದೀರ್ಘಕಾಲದವರೆಗೆ ಮೈಯೊಡ್ಡುವುದರಿಂದ ಸೂರ್ಯಾಘಾತ ಸಂಭವಿಸುವುದು. ಸುತ್ತುವರಿದ ಅತ್ಯಂತ ಉಷ್ಣ ವಾತಾವರಣದ ಕೋಣೆಯಲ್ಲಿ ಕೆಲಸ ಮಾಡುವವರಿಗೆ ಉಷ್ಣಾಘಾತ ಹೆಡಮುರಿಗೆ ಹಾಕುವುದು.

ಉರಿಬಿಸಿಲಿನಲ್ಲಿ ಬಕ್ಕ ತಲೆಯಲ್ಲಿ ಒತ್ತುವ ಗಾಡಿಯಿಂದ ದುಡಿದು ಹೊಟ್ಟೆ ತುಂಬಿಕೊಳ್ಳುವ ಕೂಲಿ ಸೂರ್ಯಾಘಾತಕ್ಕೆ ತುತ್ತಾಗಬಹುದು. ದೇಶ ಸೇವೆ ಮಾಡುವ ಬಿಸಿರಕ್ತದ ತರುಣ ಉಷ್ಣದಿಂದ ರಕ್ಷಿಸಿಕೊಳ್ಳಲು ಅಲಕ್ಷ್ಯ ತೋರಿದಲ್ಲಿ ಉಷ್ಣಾಘಾತದ ಪರಿಣಾಮಗಳನ್ನು ಅನಿವಾರ್ಯವಾಗಿ ಅನುಭವಿಸಬಹುದು.

ಸಿಡಿಯುವಂತಹ ತಲೆನೋವು, ವಿಪರೀತ ಜ್ವರ ಸೂರ್ಯಾಘಾತದ ಮುಖ್ಯ ಲಕ್ಷಣ. ತಲೆ ಸುತ್ತಬಹುದು. ವಾಂತಿ ಆಗಬಹುದು. ಚರ್ಮ ಬಿಸಿಯಾಗಿದ್ದು ಒಣಗುವುದು. ಮುಖ ಅಂಜೂರದ ಹಾಗೆ ಕೆಂಪಾಗಬಹುದು. ಇಷ್ಟಾದರೂ ಮೈ ಬೆವರುವುದಿಲ್ಲ. ಹೊಟ್ಟೆಯಲ್ಲಿ ಕಿಚ್ಚು ತುಂಬಿದಷ್ಟು ಸಂಕಟ ಸುರಿಯುವುದು. ಚಡಪಡಿಸಿ ಒಮ್ಮಿಂದೊಮ್ಮೆಲೆ ಪ್ರಜ್ಞಾಹೀನರಾಗಬಹುದು.

ಬಿಸಿಗಾಳಿ ಪ್ರಭಾವದಿಂದ ನಿದ್ದೆಗೆ ಭಂಗ ಬರುವುದು. ಮೂತ್ರಪಿಂಡದ ಮೇಲೆ ಮಾರಕ ಪರಿಣಾಮ ಬೀರಿ, ದೀರ್ಘಕಾಲಿಕ ಕಿಡ್ನಿ ರೋಗಗಳ ಸಾಂಕ್ರಾಮಿಕಕ್ಕೆ ನಾಂದಿ ಹಾಡಬಹುದು. ಬಿಸಿಗಾಳಿಗಳ ಹಾವಳಿ ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚಾಗುವುದೆಂದು ಹವಾಮಾನ ತಜ್ಞರು ಹೇಳುತ್ತಾರೆ. ಬಿಸಿಗಾಳಿಯ ಬಾಹುಬಂಧನದಲ್ಲಿ ಬಂಧಿತರಾದವರು ಶಾಕ್, ನಿರ್ಜಲೀಕರಣದಿಂದ ನಿಸ್ತೇಜಿತರಾಗುವುದಲ್ಲದೆ, ಹಲವಾರು ಆರೋಗ್ಯದ ಸಮಸ್ಯೆಗಳ ಸುಳಿಯಲ್ಲಿ ಗಿರಕಿ ಹೊಡೆಯುವರು. ಹೃದಯ ಸಂಬಂಧಿ ಮತ್ತು ಉಸಿರಾಟ ಮಂಡಲದ ರೋಗಗಳು ಉಲ್ಬಣಗೊಳ್ಳುವವು. ಐಥು ಅಚಿಣಣ ಮಾರ್ಮಿಕವಾಗಿ ಹೇಳಿರುವುದನ್ನು ಇಲ್ಲಿ ಉದಾಹರಿಸುವುದು ಸೂಕ್ತ: "That makes climate change a bigger public health problem than AIDS, than malaria, than pandemic flu..."

ಮುಂಜಾಗ್ರತಾ ಕ್ರಮಗಳು

- **'ಪ್ರಕ್ಷಾಲನಾದ್ಧಿ ಪಂಕಸ್ಯ ದೂರಾದಸ್ಪರ್ಶನಂ ವರಂ'** – ರೋಗ ಬರದ ಹಾಗೆ ನೋಡಿಕೊಳ್ಳುವುದರಲ್ಲಿಯೇ ಜಾಣತನವಿರುವುದು. ಆದ್ದರಿಂದ ಬಿರುಬಿಸಿಲಿನಲ್ಲಿ ಅಡ್ಡಾಡದೇ ಇರುವುದು ಕ್ಷೇಮಕರ. ತಲೆಗೆ ಟೋಪಿ ಇಲ್ಲವೇ ಹ್ಯಾಟನ್ನು ಹಾಕಿ ರಕ್ಷಣೆ ಪಡೆಯಬೇಕು. ಛತ್ರಿಯನ್ನು ಬಳಸಬಹುದು. ಇಂಥ ರಕ್ಷಣಾ ಸಾಧನಗಳನ್ನು ಬಳಸದೇ ಬಿಸಿಲಲ್ಲಿ ತಿರುಗಾಡುವುದೆಂದರೆ ಬಿಸಿಗಾಳಿಯ ದುಷ್ಪರಿಣಾಮಗಳನ್ನು ಆದರದಿಂದ ಸ್ವಾಗತಿಸಿದಂತೆ.
- ಹವಾಮಾನ ವರದಿಗಳ ಮಾಹಿತಿಗಳನ್ನು 'ಅಪ್ ಡೇಟ್' ಮಾಡುತ್ತಾ, 'ಬಿಸಿಗಾಳಿ' ಯಾವಾಗ ಬರಬಹುದೆಂಬುದನ್ನು ಅಂದಾಜಿಸಿ. ಮರಳುಗಾಡಿನ ಜನರು ಅಡಿಯಿಂದ ಮುಡಿಯವರೆಗೆ ಏಕೆ ಬಟ್ಟೆ ಧರಿಸುತ್ತಾರೆಂದು ಕೊಂಡಿದ್ದೀರಿ? ಸೂರ್ಯನ ತೀಕ್ಷ್ಣ ಕಿರಣಗಳಿಗೆ ಸತತವಾಗಿ ಗುರಿಯಾದರೆ ಚರ್ಮದ ನೈಜ ಸೌಂದರ್ಯವೂ ಕುಂದುತ್ತದೆ. ಕೆಲವೊಮ್ಮೆ ಸುಟ್ಟಂತಾಗುತ್ತದೆ.
- ಬಿಸಿಗಾಳಿಯ ವೇಳೆಯಲ್ಲಿ ಕ್ರೀಡಾಚಟುವಟಿಕೆಗಳಿಗೆ, ದಣಿವಾಗುವ ವ್ಯಾಯಾಮಗಳಿಗೆ ಕಡಿವಾಣ ಹಾಕಿ. ಯಥೇಚ್ಛ ಭೋಜನ, ಮದ್ಯಪಾನ ಮಾಡುವುದು ಒಳ್ಳೆಯದಲ್ಲ. ಜನನಿಬಿಡ ಪ್ರದೇಶಗಳಲ್ಲಿ, ಉಸಿರು ಕಟ್ಟಿಸುವ ಬಿಸಿ ಹವೆಯ ಕೋಣೆಯಲ್ಲಿ ವಾಸಿಸಬಾರದು.
- ನೀರಡಿಕೆಯಾಗದಿದ್ದರೂ ಸಾಕಷ್ಟು ನೀರನ್ನು ಕುಡಿಯಬೇಕು. ಬಿಸಿಗಾಳಿಯ ವೇಳೆ ಮನೆ ಬಿಟ್ಟು ಹೊರಗೆ ಹೋಗುವ ಪೂರ್ವದಲ್ಲಿ ಮತ್ತು ತಲುಪಬೇಕಾದ ಸ್ಥಳಕ್ಕೆ ಹೋಗಿ ಮುಟ್ಟಿದ ನಂತರ ಸಾಕಷ್ಟು ನೀರು ಕುಡಿಯಬೇಕು. ತಂಪಾದ ಪಾನೀಯ ಇನ್ನೂ ಪ್ರಯೋಜನಕಾರಿ. ಬಿಸಿಗಾಳಿಯ ಬಿಸಿಯ ತಾಪದ ತೋಳ ತೆಕ್ಕೆಯಲ್ಲಿ ವಯೋವೃದ್ಧರು – ಮುದ್ದು ಮಕ್ಕಳು, ಹೃದ್ರೋಗಿಗಳು, ಉಸಿರಾಟದ ತೊಂದರೆಯವರು ತಲ್ಲಣಗೊಳ್ಳುವುದು ಸರ್ವೇಸಾಮಾನ್ಯ. ಇವರಿಗೆ ವಿಶೇಷ ಕಾಳಜಿ ಅಗತ್ಯ.
- ಬಾಗಿಲು ಮುಚ್ಚಿದ ಕಾರು ಮತ್ತು ವಾಹನಗಳಲ್ಲಿ ಮಕ್ಕಳನ್ನು ಮತ್ತು ಸಾಕು ಪ್ರಾಣಿಗಳನ್ನು ಬಿಡಬೇಡಿ. ಬವಳಿ ಬಂದಂತಾದರೆ ತಕ್ಷಣ ವೈದ್ಯರನ್ನು ಕಾಣಿ.

ಬೇಸಿಗೆಯ ಕಾಲದಲ್ಲಿ ಹತ್ತಿ ಬಟ್ಟೆಗಳಲ್ಲಿನ ಚಿಕ್ಕ ಚಿಕ್ಕ ರಂಧ್ರಗಳು ಗಾಳಿಯ ಚಲನೆಗೆ ಸಹಾಯಕ. ತೊಡುವ ಬಟ್ಟೆಗಳು ಸಡಿಲಾಗಿರಲಿ. ಪಾಲಿಸ್ಟರ್ ಬಟ್ಟೆಗಳು ರಂಧ್ರರಹಿತವಾಗಿರುವುದರಿಂದ ಗಾಳಿ ಸಂಚಾರವಿಲ್ಲದೆ, ಮೈಗೆ ಅಂಟಿಕೊಂಡಂತಾಗಿ ಸೆಕೆ ಹೆಚ್ಚಾಗಿ ಹಿಂಸೆಯಾಗುತ್ತದೆ.

- ಲಸ್ಸಿ, ಅಕ್ಕಿಗಂಜಿ, ಪಾನಕ, ಮಜ್ಜಿಗೆ, ಎಳೆನೀರು... ಇತ್ಯಾದಿ ದ್ರವ ಆಹಾರ ಸಾಕಷ್ಟು ಸೇವಿಸಿ ನಿರ್ಜಲೀಕರಣ ತಲೆದೋರದಂತೆ ನೋಡಿಕೊಳ್ಳಿ. ಮನೆಯನ್ನು ತಂಪಾಗಿಸಲು ಕ್ರಮ ತೆಗೆದುಕೊಳ್ಳಿ. ಫ್ಯಾನ್ ಬಳಸಿ, ಹಸಿ ಬಟ್ಟೆ ಧರಿಸಿ, ತಣ್ಣನೆಯ ನೀರಿನಿಂದ ಮೇಲಿಂದ ಮೇಲೆ ಸ್ನಾನ ಮಾಡಿ.

ಮುಗಿಸುವ ಮುನ್ನ: ಜೀವಜಲ ಪ್ರಾಣಕ್ಕೆ ಬಲ ಎಂಬುದನ್ನು ಮರೆಯದಿರಿ. ಓ.ಆರ್.ಎಸ್. ಪಾಕೀಟುಗಳು ಎಲ್ಲಾ ಸರ್ಕಾರಿ ಆಸ್ಪತ್ರೆಯಲ್ಲಿ, ಉಪಕೇಂದ್ರಗಳಲ್ಲಿ, ಅಂಗನವಾಡಿ ಕೇಂದ್ರಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಉಚಿತವಾಗಿ ಸಿಗುತ್ತವೆ. ಅವುಗಳ ಉಪಯೋಗ ಮಾಡಿಕೊಳ್ಳಿ. ಮನೆಯಲ್ಲಿಯೂ ಇದನ್ನು ತಯಾರಿಸಬಹುದು ಎಂಬುದನ್ನು ಮರೆಯದಿರಿ. ಎಲ್ಲರ ಮನೆಯಲ್ಲಿ ಸರ್ವಸಾಮಾನ್ಯವಾಗಿ ಸಿಗುವ ಸಾಮಗ್ರಿಗಳಿಂದ ಸುಲಭದ ಅಳತೆಯ ವಿಧಾನದಿಂದ **'ಜೀವಜಲ'** ವನ್ನು ಕಡಿಮೆ ಖರ್ಚಿನಲ್ಲಿಯೇ ತಯಾರಿಸಬಹುದು.

1. ಅಡುಗೆ ಉಪ್ಪು – 3/4 ಚಮಚ
2. ಅಡುಗೆ ಸೋಡಾ – 1/2 ಚಮಚ
3. ಗ್ಲೂಕೋಸ್/ ಸಕ್ಕರೆ – 4 ಚಮಚ / 8 ಚಮಚ

ಇವುಗಳನ್ನು ಒಂದು ಲೀಟರ್ ಕುದಿಸಿ, ಆರಿಸಿ, ಸೋಸಿದ ನೀರಿನಲ್ಲಿ ಕರಗಿಸಿ ಅದಕ್ಕೆ 1/2 ನಿಂಬೆಹಣ್ಣಿನ ರಸವನ್ನು ಕೂಡಿಸಿದಲ್ಲಿ ದೇಹಕ್ಕೆ ಅಗತ್ಯವಿರುವ ಪೊಟ್ಯಾಸಿಯಂ ಪೂರೈಕೆಯಾಗುತ್ತದೆ. ಹೀಗೆ ತಯಾರಿಸಿದ ಜೀವಜಲವನ್ನು 24 ಗಂಟೆಗಳಲ್ಲಿಯೇ ಉಪಯೋಗಿಸಬೇಕು. ಒಮ್ಮೆ ತಯಾರಿಸಿದ ದ್ರಾವಣವನ್ನು ಮತ್ತೆ ಕಾಯಿಸಬಾರದು. ದ್ರಾವಣವನ್ನು ತಯಾರಿಸುವಾಗ ಶುಚಿತ್ವದ ಕಡೆಗೆ ಹೆಚ್ಚು ಗಮನ ಕೊಡಬೇಕು.

Editor : Mahabaleshwar V.Bhat, Printed and Published by **Ashok Shanbhag** on behalf of Loka Shikshana Trust, Printed at Metropolitan Media Co.Ltd., No.284(Part), 285, 286, 287 Bykampady Industrial Area, Mangaluru-575 011 and Published at Samyukta Karnataka Press, No.2, Residency Road, Bengaluru-560 025. Phone No.0824/2426622, e-mail.skmglr@gmail.com, RNI Regn.No.3864/1959 **Executive Editor : Mohan Hegde**

ಕರಿ ಹಂಚು



'ಹೇ ಮಕ್ಕ, ಏನ್ ಮಾಡ್ತದ್ದಿಯಾ? ಓದದ್ ಬರೆಯೆದ್ ಮುಗ್ಸಿಯಾ,? ಮಗಳೇ, ತಮ್ಮಾರು.... ಓದದ್ ಬರೆಯದ್ ಮುಗಿಸಿದ್ರಾ?' ಅಂತಾ ಕರಿಬಸವಯ್ಯ ಹಿರೇಮಗಳು ಹೇಮಕ್ಕನನ್ನು ಕೇಳುತ್ತಿದ್ದರು. ಹಿರೇಮಗಳು ಹೇಮಕ್ಕ 'ಎಲ್ರೂ ಓದ್ತಾ ಇದ್ದೇವೆ, ರೇಣುಕಯ್ಯ ಯಾಕೋ ಓದೋದ್ ಬರೆಯೋದ್ ಮಾಡೋಕೆ ಇಷ್ಟ ಪಡ್ತಾ ಇಲ್ಲ. ಅವನ ಲಕ್ಷ್ಯ ಯಾವಾಗಲೂ ಹೊರಗೆ ಇರುತ್ತದೆ. ಸದಾ ಊರಿನ ಜನರ ಬಗ್ಗೆ ಮಾತಾಡ್ತಾನೆ' ಅಂತ ಅಪ್ಪನಿಗೆ ಉತ್ತರಿಸಿದಳು. ಹೀಗೆ ಮಾತನಾಡೋ ವೇಳೆಗೆ ಸೂರ್ಯ ತಾಯಿಯೊಡಲು ಸೇರಿ ಮೂರು ತಾಸು ಆಗಿತ್ತು. ಕತ್ತಲು ಅನ್ನೋದು ರೊಟ್ಟಿ ಬೇಯಿಸುವ ಹಂಚಿನಂತೆ ಢಾಳಾಗಿ ಓಣಿಯ ತುಂಬೆಲ್ಲ ಹರಡಿತ್ತು, ದಟ್ಟ ಕತ್ತಲು ಮನೆಯ ಒಳಗಡೆಯೂ ಬೆಳಕನ್ನು ಸೀಳಿಕೊಂಡು ನುಗ್ಗಿತ್ತು. ಆ ಹೊತ್ತಿನಲ್ಲಿ ರತ್ನವ್ವ, ಎಡಗಾಲನ್ನು ಚಾಚಿ, ಬಲಗಾಲನ್ನು ಮಡಚಿಕೊಂಡು ಕುಳಿತಿಕೊಂಡು, ಮಡಚಿದ ಬಲಗಾಲಿಗೆ ತಾಕಿಕೊಂಡಂತೆ ಕೊಣಬಿಯನ್ನು ಇಟ್ಟುಕೊಂಡು ರೊಟ್ಟಿಯನ್ನು ಬಡಿಯುತ್ತಿದ್ದಳು. ರತ್ನವ್ವಳ ಕೆಂಪಾದ ಮುಖದ ಮೇಲೆ ಜೋಳದ ಹಿಟ್ಟು ಅಲ್ಲಲ್ಲಿ ರಂಗೋಲಿಯನ್ನು ಬಿಡಿಸಿತ್ತು. ತಣ್ಣನೆಯ ಬಟ್ಟೆ ಬಲಗೈಯ ಮುಂಗೈಯಲ್ಲಿ ಇತ್ತು. 'ದಬ್ ದಬ್' ಅಂತ ಬಡಿಯುತ್ತಿದ್ದ ರೊಟ್ಟಿಯ ಶಬ್ಧ ಅಲೆ ಅಲೆಯಾಗಿ, ನಾದವನ್ನು ಹೊರಡಿಸುತ್ತ ಮನೆಯ ಒಳಗಿನಿಂದ ದಾಟಿಕೊಂಡು ಓಣಿಯಲ್ಲಿ ತೇಲುತ್ತಿತ್ತು. ರತ್ನವ್ವ ಎಡಗೈ ತೋಳಿನಿಂದ ಹಣೆಯ ಮೇಲಿನ ಬೆವರನ್ನು ಒರಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಳು. ಹಣೆಯ ಮೇಲಿನ ಬೆವರ ಹನಿಗಳು ಕೆಲವೊಮ್ಮೆ ರಪ್ಪನೆ ಅಂತಾ ಕೊಣಬಿಯ ಮೇಲೆ ಬೀಳುತ್ತಿದ್ದವು. ಕೊಣಬಿಯಲ್ಲಿನ ಹಸಿ ರೊಟ್ಟಿಯನ್ನು ಬೇಯಿಸಲು ಎಡಗೈ ಸಹಾಯದಿಂದ ಬಲಗೈ ಮೇಲೆ ಹಾಕಿಕೊಂಡು, ನಿಗಿ ನಿಗಿ ಕೆಂಡದೊಂದಿಗೆ ಧಗ ಧಗ ಉರಿಯುತ್ತಿದ್ದ ಒಲೆಯ ಮೇಲೆ ಉರಿಗೆ ಮೈಯೊಡ್ಡಿದ್ದ ದುಂಡನೆಯ ಹಂಚಿನ ಮೇಲೆ ಹಾಕುತ್ತಿದ್ದಳು. ಆ ಹಂಚು ತನ್ನೊಡಲಿಗೆ ಬೆಂಕಿ ತಾಗಿಸಿಕೊಂಡು ಬೆಂಕಿಯ ಕೆಂಡಕ್ಕೆ ಮೈಗೆಯಲ್ಲಾ ಕಪ್ಪನೆಯ ಬಣ್ಣವನ್ನು ದಟ್ಟವಾಗಿ ಬಳದುಕೊಂಡಿತ್ತು. ದಿಗ್ ದಿಗ್ ಉರಿಯುತ್ತಿದ್ದ ಬೆಂಕಿಯ ಕೆನ್ನಾಲಿಗಿಗೆ ಅಳುಕುತ್ತಿರಲಿಲ್ಲ. ಲೋಕದೆದರು ಕಪ್ಪಾಗಿ ಕಾಣಿಸಿಕೊಂಡರು, ಹಲವರು ನಿಂದನೆಗೆ ಈ ಹಂಚನ್ನು ಬಳಸಿದರು ಬ್ಯಾಸ್ರ ಮಾಡಿಕೊಳ್ಳದೇ, ಆ ಮನೆಯವರ ಹೊಟ್ಟೆಯನ್ನು ತುಂಬಿಸಿತ್ತು. ಬಲಗೈ ಮುಂಗೈಯಲ್ಲಿದ್ದ ಹಸಿ ಬಟ್ಟೆಯಿಂದ ಹೆಂಚಿನ ಮೇಲಿದ್ದ ರೊಟ್ಟಿಗೆ ನೀರನ್ನು ಹಚ್ಚಿದಾಗ, ನೀರಿನ ಸ್ಪರ್ಶಕ್ಕೆ ರೊಟ್ಟಿ ಉಬ್ಬಿಕೊಳ್ಳುತ್ತಾ ಮೈಯೊಡ್ಡುತ್ತಿತ್ತು,ಇತ್ತ ಒಲೆಯಲ್ಲಿ ರೊಟ್ಟಿ ಬೇಯುತ್ತಿದ್ದರೆ, ರತ್ನವ್ವಳ ಹಣೆಯ ಮೇಲೆ ಬೆವರಿನ ಹನಿಗಳು ಸಾಲುಗಟ್ಟಿ ನಿಂತಿರುತ್ತಿದ್ದವು. ಹಾಗೆ ಸಾಲುಗಟ್ಟಿ ಬರುತ್ತಿದ್ದ ಬೆವರಿನ ಹನಿಗಳನ್ನು ಎಡಗೈ ತೋಳಿನಿಂದ ವರಿಸಿಕೊಳ್ಳುತ್ತಿದ್ದಳು. ಹಾಗೆ ವರಿಸಿಕೊಳ್ಳುವಾಗಲೇ ದಗ ದಗ ಉರಿಯುವ ಕೆಂಡಕ್ಕೆ ಪೈಪೋಟಿಯೆಂಬಂತೆ ತುಪಕ್ಕನೇ ಕೊಣಬಿಯ ಮೇಲೆ ಬೀಳುತ್ತಿದ್ದವು. ಹಾಗೆ ಬೆವರಿನ ಹನಿಗಳು ಬಿದ್ದಾಗಲೆಲ್ಲ, ಕನಸುಗಳು ಪಕ್ಕನೇ ರತ್ನವ್ವಳ ಕಣ್ಮುಂದೆ ಬರುತ್ತಿದ್ದವು. ಹಾಗೆ ಕನಸುಗಳು ಬಂದಾಗಲೆಲ್ಲ ಮನೆದೇವರು ಶ್ರೀ ಮಲ್ಲಿಕಾರ್ಜುನಗೆ ಎರಡು ಕೈಗಳನ್ನು ಜೋಡಿಸುತ್ತಿದ್ದಳು. ನನ್ನ ಬೆವರಿಗೆ ಬೆಲೆ ಬರಬೇಕಾದರೆ ನನ್ನ ಮಕ್ಕಳು ಓದಿ ಸರ್ಕಾರಿ ಹುದ್ದೆಯೋ ಇನ್ನು ಯಾವುದಾದರೂ ಉದ್ಯೋಗ ಹಿಡಿಯಬೇಕು ಅಂತಾ ಮನಸೊಳಗೆ ಹೇಳಿಕೊಳ್ಳುತ್ತಿದ್ದಳು. ರತ್ನವ್ವ ಹೀಗೆ ದೇವರ ಮೊರೆ ಹೋಗೋದಕ್ಕೂ ಕಾರಣವಿತ್ತು .ತನ್ನ ಉದರದಲ್ಲಿ ಜನಿಸಿದ ಆರು ಮಕ್ಕಳು ಬೆಳೆದು ಎದೆಮಟ್ಟಕ್ಕೆ ಬಂದಿದ್ದರು. ಆದರೆ ಯಾವುದೇ ಕೆಲಸ ಕೆಲಸ ಸಿಕ್ಕಿರಲಿಲ್ಲ. ಇದು ರತ್ನವ್ವಳ ಮುಖದಲ್ಲಿ ಚಿಂತೆಯ ಗೆರೆಗಳು ಮೂಡಲು ಕಾರಣವಾಗಿದ್ದವು. ಜೊತೆಗೆ ಅವರೂರಿನ ಸರಿಕರ ಮಕ್ಕಳು ಬೆನ್ನೂರಿನ ವಿವಿಧ ಬ್ಯಾಂಕ್, ಚಿಟ್ ಕಂಪನಿಗಳಲ್ಲಿಯೋ, ದೂರದ ಬೆಂಗಳೂರಿನ ವಿವಿಧ ಕಂಪನಿಗಳಲ್ಲಿಯೋ ಕೆಲಸಕ್ಕೆ ಸೇರಿಕೊಂಡಿದ್ದರು.ತಿಂಗಳಿಗೆ ಎಂಟ್ಹತ್ತು ಸಾವಿರ ರೂಪಾಯಿಗಳನ್ನು ದುಡಿದು ಮನೆಗೆ ಕೊಡುತ್ತಿದ್ದರು.

ರತ್ನವ್ವ ಬೆವರ ಹನಿ ಸುರಿಸುತ್ತಾ ಮಕ್ಕಳ ಭವಿಷ್ಯದ ಕನಸು ಕಾಣುತ್ತಿದ್ದರೆ, ಅವಳ ಗಂಡ ಕರಿಬಸವಯ್ಯನ ದಾರಿ ಬೇರೆಯೇ ಆಗಿತ್ತು. ಸರ್ಕಾರಿ ಇಲಾಖೆಯ ಸಣ್ಣ ನೌಕರಿಯಲ್ಲಿದ್ದ ಅವರು, ಉಳಿತಾಯದ ಹೆಸರಿನಲ್ಲಿ ಬಡ್ಡಿ ವ್ಯವಹಾರಕ್ಕೆ ಇಳಿದಿದ್ದರು. ಅವರ ಹಳೆಯ ಟ್ರಂಕ್‌ನಲ್ಲಿ ಕೂಡಿಟ್ಟ ಹಣ ಅವರಿಗೆ ದೈವವಾಗಿತ್ತು. ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿ ಕೆಲಸ ಕೊಡಿಸುವ ಶಕ್ತಿ ಇದ್ದರೂ, ಹಣದ ಮೇಲಿನ ವ್ಯಾಮೋಹ ಅವರನ್ನು ಸುಮ್ಮನಿರಿಸಿತ್ತು. ಆ ಬಡ್ಡಿ ಹಣ ವಸೂಲಿ ಮಾಡುವ ಜವಾಬ್ದಾರಿಯನ್ನು ಹಿರೇಮಗ ರೇಣುಕಯ್ಯನಿಗೆ ನೀಡಿದ್ದರು.

ರೇಣುಕಯ್ಯ ಸಾಲಗಾರರ ಮನೆಗಳಿಗೆ ಹೋದಾಗ ಅಪ್ಪನ ಅಧಿಕಾರ ಚಲಾಯಿಸುವುದರಲ್ಲಿ ಸುಖ ಕಂಡಿದ್ದ. ಸಾಲಗಾರರು ಅವನಿಗೆ ಎಲೆ–ಅಡಿಕೆ, ಗುಟ್ಕಾ ಹಾಗೂ ಎಗ್ ರೈಸ್ ಕೊಡಿಸಿ ಅವನ ಹಸಿವು ತಣಿಸಬೇಕಿತ್ತು. ಓದು ಬರಹ ಮರೆತ ರೇಣುಕಯ್ಯನಿಗೆ ಅಪ್ಪನ ಬಡ್ಡಿ ಹಣದ ರುಚಿ ಮದ್ಯ ಮತ್ತು ಮಾಂಸದ ಚಟಕ್ಕೆ ಎಳೆದುಕೊಂಡು ಹೋಯಿತು. ಸಾಲಗಾರರ ಗೋಳಿನ ಮೇಲೆ ಅವನ ವೈಯಕ್ತಿಕ ಸುಖದ ಅರಮನೆ ನಿರ್ಮಾಣವಾಗಿತ್ತು.

ಇತ್ತ ರತ್ನವ್ವ ತನ್ನ ಬೆವರಿನ ಹನಿಗಳು ಮಗನ ಬದುಕನ್ನು ಹಸನು ಮಾಡಲಿ ಎಂದು ಹಂಚಿನ ಮುಂದೆ ಕುಳಿತು ದೇವರಲ್ಲಿ ಪ್ರಾರ್ಥಿಸುತ್ತಿದ್ದಳು. ಆದರೆ ಹಂಚು ಸುಟ್ಟು ಬೆಂದರೂ ರೊಟ್ಟಿ ನೀಡುವಂತೆ, ರತ್ನವ್ವಳ ಕನಸುಗಳು ಮಾತ್ರ ಸುಟ್ಟು ಬೂದಿಯಾಗುತ್ತಿದ್ದವು. ಕರಿಬಸವಯ್ಯ ಟ್ರಂಕ್‌ನಲ್ಲಿ ಬಚ್ಚಿಟ್ಟಿದ್ದ ಹಣ ಬಡ್ಡಿ ರೂಪದಲ್ಲಿ ಬೆಳೆಯುತ್ತಿದ್ದರೆ, ಮಗ ರೇಣುಕಯ್ಯ ಕುಡಿತಕ್ಕೆ ಬಲಿಯಾಗಿ ದಾರಿ ತಪ್ಪಿದ್ದ. ಉಳಿದ ಮಕ್ಕಳೂ ಅಪ್ಪನ ಮೊಂಡುತನ ಮತ್ತು ಅಣ್ಣನ ಹಾದಿಯನ್ನೇ ಹಿಡಿದು ಪಟ್ಟಣಗಳ ಕಡೆಗೆ ಚದುರಿ ಹೋದರು.

ಮನೆಯ ಹಂಚು ಕಪ್ಪಾಗಿದ್ದರೂ ಹೊಟ್ಟೆ ತುಂಬಿಸುವ ಅನ್ನ ನೀಡುತ್ತಿತ್ತು. ಆದರೆ ಅಪ್ಪನ ಹಣದ ವ್ಯಾಮೋಹ ಮತ್ತು ಮಗನ ದುಶ್ಚಟಗಳು ಇಡೀ ಕುಟುಂಬದ ಬದುಕನ್ನೇ ಕಪ್ಪಾಗಿಸಿದವು. ಕೊನೆಗೆ ರತ್ನವ್ವಳ ಕಣ್ಣೀರು ಮತ್ತು ಹಂಚಿನ ಮೇಲಿನ ಬೆವರು ಎರಡೂ ಯಾವ ಬೆಲೆಯೂ ಇಲ್ಲದೆ ಮಣ್ಣಲ್ಲಿ ಮಣ್ಣಾದವು.

■ ಮಲ್ಲಪ್ಪ ಫ ಕರೇಣ್ಣನವರ
| ಹಾವೇರಿ

ಪರಿಶ್ರಮದ ಫಲ

ಒಂದು ಊರು. ಅಲ್ಲೊಂದು ಮಠ. ಅಲ್ಲಿನ ಗುರುಗಳು ಯೋಗಿಗಳು. ಜ್ಯೋತಿಷ್ಯ ಶಾಸ್ತ್ರವನ್ನು ಚೆನ್ನಾಗಿ ತಿಳಿದವರು. ಒಮ್ಮೆ ಒಬ್ಬ ಬಾಹ್ಮಣ ತನ್ನ ಗಂಡು ಮಗುವನ್ನು ಕರೆತಂದ, ಅದರ ಹಣೆ ಬರಹವನ್ನು ತಿಳಿಯಲು. ಗುರುಗಳು ಮಗು ಹುಟ್ಟಿದ ಘಳಿಗೆಯ ಗ್ರಹಗತಿಗಳನ್ನು ಲೆಕ್ಕ ಹಾಕಿ ಆ ಮಗು ತನ್ನ 18ನೇ ವಯಸ್ಸಿನಲ್ಲಿ ಆನೆಯ ಮೇಲೆ ಕುಳಿತುಕೊಳ್ಳುವ ಯೋಗವನ್ನು ಹೊಂದಿದೆ ಎಂದರು. ಆನೆಯ ಮೇಲೆ ಕೂಡಬೇಕೆಂದರೆ ಅವನು ರಾಜನಾಗುತ್ತಾನೆ ಎಂದುಕೊಂಡರು ಅವನ ಮನೆಯವರು. ಅವನನ್ನು ರಾಜಕುಮಾರನಂತೆಯೆ ನೋಡಿಕೊಂಡರು. ಅವನು ವಿದ್ಯೆ ಬುದ್ಧಿಯಲ್ಲಿ ಏನೂ ಸಾಧನೆ ಮಾಡಲಿಲ್ಲ. 18ನೇ ವರ್ಷದ ಹುಟ್ಟಿದ ಹಬ್ಬ. ಆ ಮಗು ಊರ ಹೊರಗಿನ ದೇವಸ್ಥಾನದ ಮುಂದಿದ್ದ ಕಲ್ಲಿನ ಆನೆಯೊಂದರ ಮೇಲೆ ಕುಳಿತು ಹೇ ಹೇ ಎನ್ನುತ್ತಿದ್ದ. ಇದಕ್ಕೇನೆನ್ನಬೇಕು?

ಆ ಮಗು ಯಾವ ಆನೆಯ ಮೇಲೆ ಕುಳಿತುಕೊಳ್ಳುವ ಪಾತ್ರವನ್ನು ಬೆಳೆಸಿಕೊಂಡಿದ್ದನೋ ಅಂತಹ ಆನೆಯ ಮೇಲೆ ಕುಳಿತುಕೊಳ್ಳುವ ಯೋಗ ಅವನದಾಯ್ತು. ಕೆಲಸ ಕಲಿತಿದ್ದರೆ ಆತ ಮಾವುತನಾಗಬಹುದಿತ್ತು. ಆನೆಯನ್ನು ಪಳಗಿಸುವವನಾಗಬಹುದಿತ್ತು. ವಿದ್ಯೆ ಬುದ್ಧಿ ಬೆಳೆಸಿಕೊಂಡು ಜ್ಞಾನಿಯಾಗಿದ್ದಿದ್ದರೆ ಆನೆಯ ಮೇಲೆ ಕುಳಿತು ಮೆರವಣಿಗೆ ಮಾಡಿಸಿಕೊಳ್ಳಬಹುದಿತ್ತು. ವಿದ್ಯೆ ಬುದ್ಧಿಯನ್ನು ಬೆಳೆಸಿಕೊಳ್ಳದುದ್ದರ ದುರದೃಷ್ಟಕರ ಪ್ರಭಾವ ಅದು. ನಾವು ಜೀವನದ ಯಾವುದೇ ಗುರಿಯನ್ನು ತಲುಪಲು ಅದಕ್ಕೆ ಪೂರಕಾವಾಗಿ ಶಾರೀರಿಕ, ಬೌದ್ಧಿಕ ಪರಿಶ್ರಮ ಸಾಧನೆಗಳನ್ನು ನಾವೇ ಮಾಡಬೇಕಾಗುತ್ತದೆ. ಆಗ, ಬುದ್ಧಿಯಲ್ಲಿ ವಿಕಸನ. ವಿವೇಕ ಚಿಂತನ ವಿವೇಚನೆಗಳು ಬೆಳೆಯುತ್ತವೆ. ಕೆಲವೊಮ್ಮೆ ಸಮಯ ಸಂದರ್ಭಗಳ ದೆಸೆಯಿಂದ ನಾವಿಟ್ಟುಕೊಂಡ ಗುರಿ ತಪ್ಪಿ ಬೇರೆಯಾಗಿಯೇ ಏನನ್ನೋ ಪಡೆಯಬಹುದು. ಆದರೆ, ಮಾಡಿದ ಪರಿಶ್ರಮ ಫಲ ಕೊಡದೇ ಹೋಗುವುದಿಲ್ಲ. ನಾವು ಪಡೆದದ್ದು ಉತ್ಕೃಷ್ಟವಾಗಿರುತ್ತದೆ. ಪರಿಶ್ರಮದ ಫಲ ಎಂದೂ ಸಿಹಿ.



ಎನ್.ಆರ್.ರಾವ್

ಅಕ್ಕಿ ಕಾಳುಗಳ ಡ್ಯಾನ್ಸ್ ನೋಡಿದ್ದೀರಾ..!

ಶಬ್ದದ ಕಂಪನ (Sound Vibration)

ನಿಮ್ಮ ನೆಚ್ಚಿನ ಹಾಡನ್ನು ಕೇಳಿದಾಗ ನೀವು ಹೇಗೆ ಕುಣಿಯುತ್ತೀರೋ, ಹಾಗೆಯೇ ಅಕ್ಕಿ ಕಾಳುಗಳು ಕೂಡ ಸಂಗೀತಕ್ಕೆ ಕುಣಿಯಬಲ್ಲವು ಎಂಬುದು ನಿಮಗೆ ಗೊತ್ತೇ? ಅರೆ, ಅಕ್ಕಿ ಕಾಳುಗಳಿಗೆ ಕಿವಿಗಳಿಲ್ಲ, ಅವು ಹೇಗೆ ಕೇಳಿಸಿಕೊಳ್ಳುತ್ತವೆ ಎಂದು ಯೋಚಿಸುತ್ತಿದ್ದೀರಾ? ಹಾಗಾದರೆ ಶಬ್ದದ ಶಕ್ತಿಯನ್ನು ಬಳಸಿ, ಅಕ್ಕಿ ಕಾಳುಗಳನ್ನು ಕುಣಿಯುವಂತೆ ಮಾಡುವ ಮೋಜಿನ ಪ್ರಯೋಗವನ್ನು ನಾವೇ ಮನೆಯಲ್ಲಿ ಮಾಡಿ ನೋಡೋಣ ಬನ್ನಿ.

ಈ ಪ್ರಯೋಗಕ್ಕೆ ನಮಗೆ ಅಗತ್ಯವಿರುವ ವಸ್ತುಗಳು ತುಂಬಾ ಸರಳ. ಒಂದು ಚಿಕ್ಕ ಪ್ಲಾಸ್ಟಿಕ್ ಬೌಲ್ (ಕಪ್ ಕೂಡ ಬಳಸಬಹುದು), ಒಂದು ಸ್ವಚ್ಛವಾದ ಪ್ಲಾಸ್ಟಿಕ್ ಕವರ್ ಅಥವಾ ಅಂಟಿಕೊಳ್ಳುವ ಪ್ಲಾಸ್ಟಿಕ್ ಫಿಲ್ಮ್, ಅದನ್ನು ಬೌಲ್ ಮೇಲೆ ಬಿಗಿಯಾಗಿ ಹಿಡಿದಿಡಲು ಒಂದು ರಬ್ಬರ್ ಬ್ಯಾಂಡ್ ಮತ್ತು ಒಂದಷ್ಟು ಅಕ್ಕಿ ಕಾಳುಗಳು ಅಥವಾ ಸಕ್ಕರೆ. ಮುಖ್ಯವಾಗಿ ಶಬ್ದ ಮಾಡಲು ನೀವು ಅಥವಾ ನಿಮ್ಮ ನೆಚ್ಚಿನ ಹಾಡು ಬೇಕಾಗುತ್ತದೆ!

ಪ್ರಯೋಗವನ್ನು ಮಾಡುವ ವಿಧಾನ ಹೀಗಿದೆ: ಮೊದಲು ಪ್ಲಾಸ್ಟಿಕ್ ಬೌಲ್ ತೆಗೆದುಕೊಳ್ಳಿ. ಅದರ ಮೇಲೆ ಪ್ಲಾಸ್ಟಿಕ್ ಕವರ್ ಹಾಕಿ, ರಬ್ಬರ್ ಬ್ಯಾಂಡ್ ಬಳಸಿ ತುಂಬಾ ಬಿಗಿಯಾಗಿ ಕಟ್ಟಿ. ಅದು ಒಂತರಾ ಡ್ರಮ್ ಚರ್ಮದ ತರಹ ಇರಬೇಕು! ಈಗ ಅದರ ಮೇಲೆ ಸ್ವಲ್ಪ ಅಕ್ಕಿ ಕಾಳುಗಳನ್ನು ಹರಡಿ. ಈಗ ಮಜಾ ಶುರು! ಬೌಲ್ ಹತ್ತಿರ ಬಂದು ಜೋರಾಗಿ 'ಹಾಪ್ ಹಾಪ್' ಅಂತ ಕೂಗಿ, ಅಥವಾ ಚಪ್ಪಾಳೆ ತಟ್ಟಿ. ಇಷ್ಟವಾದ ಹಾಡು ಹಾಕಿದರೂ ಆಗುತ್ತದೆ.

ಈಗ ಏನಾಗುತ್ತದೆ ನೋಡಿ! ನೀವು ಶಬ್ದ ಮಾಡಿದ ತಕ್ಷಣ ಅಕ್ಕಿ ಕಾಳುಗಳು ಬೌಲ್ ಮೇಲೆ ಜಿಗಿಯಲು ಶುರುಮಾಡುತ್ತವೆ! ಸಂಗೀತದ ತಾಳಕ್ಕೆ ತಕ್ಕಂತೆ ಅವು ಕುಣಿಯುತ್ತಿರುವಂತೆ ಕಾಣುತ್ತವೆ, ಅಲ್ಲವೇ?

ಹಾಗಾದರೆ, ಹೀಗೇಕೆ ಆಗುತ್ತದೆ? ನಾವು ಮಾತನಾಡುವಾಗ ಅಥವಾ ಸಂಗೀತ ಕೇಳುವಾಗ ಶಬ್ದವು ಗಾಳಿಯಲ್ಲಿ ತರಂಗಗಳಂತೆ ಪ್ರಯಾಣಿಸುತ್ತದೆ. ಈ ತರಂಗಗಳು ಪ್ಲಾಸ್ಟಿಕ್ ಕವರ್ ಅನ್ನು ತಲುಪಿದಾಗ, ಅದು ಕಂಪಿಸುತ್ತದೆ (ಅಲುಗಾಡುತ್ತದೆ). ಈ ಕಂಪನವು ಅಕ್ಕಿ ಕಾಳುಗಳನ್ನು ಮೇಲಕ್ಕೆ ತಳ್ಳುತ್ತದೆ, ಹಾಗಾಗಿ ಅವು ನಮಗೆ ಡ್ಯಾನ್ಸ್ ಮಾಡುತ್ತಿರುವಂತೆ ಕಾಣುತ್ತವೆ!

ನೀವೂ ಚಿತ್ರ ಬಿಡಿಸಿ



ಬಣ್ಣ ತುಂಬಿ ಸಂಭ್ರಮಿಸಿ

ಇತಿಹಾಸದಲ್ಲಿ ಇಂದು

4 ಮೇ 2026

ಡಾ. ಕೇಶವ ನೀರಾ, 81475 67182

ನಾಲ್ಕನೇ ಆಂಗ್ಲೋ–ಮೈಸೂರು ಯುದ್ಧದಲ್ಲಿ ಸೆರಿಂಗಪಟ್ಟಣ ಅಥವಾ ಶ್ರೀರಂಗಪಟ್ಟಣ ಕದನದಲ್ಲಿ ಮೇ 4ರ 1799ರಂದು ಜನರಲ್ ಜಾರ್ಜ್ ಹ್ಯಾರಿಸ್ ನೇತೃತ್ವದಲ್ಲಿ ಬ್ರಿಟಿಷ್ ಸೈನ್ಯ ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿ ನಗರವನ್ನು ಆಕ್ರಮಿಸಿ ಟಿಪ್ಪು ಸುಲ್ತಾನನನ್ನು ಹತ್ಯೆ ಮಾಡಿದರು. ಟಿಪ್ಪು ಸುಲ್ತಾನನ ಮರಣವನ್ನು ಬ್ರಿಟನ್‌ನಲ್ಲಿ ಸಾರ್ವಜನಿಕ ರಜೆ ಘೋಷಸುವ ಮೂಲಕ ಆಚರಿಸಲಾಯಿತು.

ಜನನ ಅಂದಿನ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಹಿರಿಯ ನಾಯಕರು ಹಾಗೂ ಅಂದಿನ ಮೈಸೂರು ರಾಜ್ಯದ ಅಂದರೆ ಇಂದಿನ ಕರ್ನಾಟಕದ ಮೊದಲ ಮುಖ್ಯಮಂತ್ರಿಯವರಾದ ಕ್ಯಾಸಂಬಳ್ಳಿ ಚೆಂಗಲರಾಯ ರೆಡ್ಡಿ ಅವರು 1902ರಲ್ಲಿ ಅಂದಿನ ಬ್ರಿಟಿಷ್ ಭಾರತದ ಮೈಸೂರು ಸಾಮ್ರಾಜ್ಯದ, ಕೋಲಾರದ ಕ್ಯಾಸಂಬಳ್ಳಿಯಲ್ಲಿ ಜನಿಸಿದರು.

ವಿಶ್ವ ನಗು ದಿನ: ಜಾಗತಿಕ ನಗು ಯೋಗ ಆಂದೋಲನದ ಹಿಂದಿನ ದಾರ್ಶನಿಕ ಡಾ. ಮದನ್ ಕಟಾರಿಯಾ ಅವರ ಪ್ರಯತ್ನದಿಂದ ಮೇ ಮಾಹೆಯ ಮೊದಲ ಭಾನುವಾರವನ್ನು ವಿಶ್ವ ನಗು ದಿನವೆಂದು ಘೋಷಿಸಲಾಗಿದೆ.

ಅಂತಾರಾಷ್ಟ್ರೀಯ ಅಗ್ನಿಶಾಮಕ ದಳದವರ ದಿನವನ್ನು ಪ್ರತಿ ವರ್ಷ ಮೇ 4 ರಂದು ಆಚರಿಸಲಾಗುತ್ತದೆ ಮತ್ತು ಮೊಟ್ಟ ಮೊದಲ ಬಾರಿಗೆ ಈ ದಿನವನ್ನು 4 ಮೇ 1999ರಂದು ಆಚರಿಸಲಾಯಿತು. ನಮ್ಮನ್ನು ಸುರಕ್ಷಿತವಾಗಿಡಲು, ನಮ್ಮ ಆಸ್ತಿಯನ್ನು, ನಮ್ಮ ಸಮುದಾಯಗಳನ್ನು ರಕ್ಷಿಸಲು ಸಹಾಯ ಮಾಡುವ ಅಗ್ನಿಶಾಮಕ ದಳದ ಸಿಬ್ಬಂದಿಯನ್ನು ನೆನೆಯುವ ಮತ್ತು ಗೌರವಿಸುವ ದಿನವಾಗಿದೆ.

ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನಾ ವಿಧಾನಗಳು

ಭಾರತೀಯ ಹವಾಮಾನ ಇಲಾಖೆಯು ತನ್ನ ಐತಿಹಾಸಿಕ 150ನೇ ವರ್ಷದ ಸೇವೆಯನ್ನು 2025ಕ್ಕೆ ಪೂರೈಸಿದೆ. ಹವಾಮಾನ ವೀಕ್ಷಣೆಯ ಧ್ಯೇಯದಿಂದ 1875ರಲ್ಲಿ ಸ್ಥಾಪನೆಯಾದ ಇಲಾಖೆಯು ಇಂದು ವಿಶ್ವದರ್ಜೆಯ ವೈಜ್ಞಾನಿಕ ಸಂಸ್ಥೆಯಾಗಿ ವಿಕಸನಗೊಂಡಿದೆ. ಭಾರತೀಯ ಹವಾಮಾನ ಇಲಾಖೆ (IMD) ಜನರಿಗೆ ಹವಾಮಾನ ಮುನ್ಸೂಚನೆಯನ್ನು ಪ್ರಚುರಪಡಿಸುವುದಕ್ಕಾಗಿ ಅತ್ಯಾಧುನಿಕ, ಬಹು–ಹಂತದ ವಿಧಾನಗಳನ್ನು ಅನುಸರಿಸುತ್ತದೆ. ಇದನ್ನು ಮುಖ್ಯವಾಗಿ

ಇ ಜಾಲ

ವಿಶ್ವನಾಥ್ ಭಟ್
ಧಾರವಾಡ

ಸಮಯದ ಆಧಾರದ ಮೇಲೆ ಮತ್ತು ನಿರ್ದಿಷ್ಟ ಕ್ಷೇತ್ರ ಅಥವಾ ಜಾಗದ ಅವಶ್ಯಕತೆಗಳ ಆಧಾರದ ಮೇಲೆ ವರ್ಗೀಕರಿಸಲಾಗಿದೆ. ದೈನಂದಿನ ಕಾರ್ಯಾಚರಣೆಗಳಿಗೆ ಬೇಕಾಗಿ, ಮುನ್ಸೂಚನೆಗಳನ್ನು ಮುಂದಾಲೋಚನಾ ಸಮಯದ ಆಧಾರದ ಮೇಲೆ ವರ್ಗೀಕರಿಸಲಾಗುತ್ತದೆ. ಇದು ತಕ್ಷಣದ ತುರ್ತು ಪ್ರತಿಕ್ರಿಯೆ ಮತ್ತು ದೀರ್ಘಾವಧಿ ಕಾರ್ಯತಂತ್ರದ ಯೋಜನೆ ಎರಡಕ್ಕೂ ಅನುವು ಮಾಡಿಕೊಡುತ್ತದೆ. 'ನೌಕಾಸ್ಟಿಂಗ್' ಎಂಬುದು ಇಲಾಖೆಯು ಬಳಸುವ ಅತ್ಯಂತ ತಕ್ಷಣದ ಮುನ್ಸೂಚನೆಯಾಗಿದ್ದು, ಗುಡುಗು ಸಹಿತ ಮಳೆ ಅಥವಾ ಬಿರುಗಾಳಿಯಂತಹ ಆಕಸ್ಮಿಕ, ತೀವ್ರ ಘಟನೆಗಳ ಬಗ್ಗೆ ಸಾರ್ವಜನಿಕರನ್ನು ಎಚ್ಚರಿಸಲು ಆರು ಗಂಟೆಗಳವರೆಗೆ



ಮಾನ್ಯವಾದ ಹೆಚ್ಚಿನ–ಆವರ್ತನದ ಅಪ್‌ಡೇಟ್‌ಗಳನ್ನು ಒದಗಿಸುತ್ತದೆ. ಅವಧಿ ವಿಸ್ತರಿಸಿದಂತೆ, ಅಲ್ಪಾವಧಿ (3 ದಿನಗಳವರೆಗೆ) ಮತ್ತು ಮಧ್ಯಮ ಅವಧಿಯ (3 ರಿಂದ 10 ದಿನಗಳು) ನಿಯಮಿತ ಮುನ್ಸೂಚನೆಗಳು ಸಾರ್ವಜನಿಕ ಸುರಕ್ಷತೆ ಮತ್ತು ಕೃಷಿ ಸಮನ್ವಯಕ್ಕೆ ಅತ್ಯಗತ್ಯವಾಗುತ್ತವೆ. ಇನ್ನೂ ಮುಂದುವರಿದು, ವಿಶಾಲ ವ್ಯಾಪ್ತಿಯ ಸಮಯಕ್ಕೆ , IMD ವಿಸ್ತೃತ ಅವಧಿ ಮತ್ತು ದೀರ್ಘಾವಧಿ ಮುನ್ಸೂಚನೆಗಳನ್ನು ಬಳಸುತ್ತದೆ. ಇವು ಬಹಳ ನಿರ್ಣಾಯಕವಾಗಿರುವ ಋತುಮಾನಗಳ ಬಗೆಗೆ ಮಾಹಿತಿಯನ್ನು ಒದಗಿಸುತ್ತವೆ. ವಿಶೇಷವಾಗಿ, ರಾಷ್ಟ್ರದ ಜಲ ಸಂಪನ್ಮೂಲ ನಿರ್ವಹಣೆ ಮತ್ತು ಆರ್ಥಿಕತೆಯ ಮೇಲೆ ಪರಿಣಾಮ ಬೀರುವ ನೈಋತ್ಯ ಮಾನ್ಸೂನ್‌ಗಳ ಮುನ್ಸೂಚನೆಯಲ್ಲಿ ಇವುಗಳದ್ದೇ ಸಿಂಹಪಾಲು.

ವರ್ಗ	ಅವಧಿ (Lead Time)	ಉದ್ದೇಶ / ಬಳಕೆ
ನೌಕಾಸ್ಟಿಂಗ್ (Nowcasting)	0 ರಿಂದ 6 ಗಂಟೆಗಳು	ತಕ್ಷಣದ–ಗುಡುಗು, ಮಿಂಚು ಮತ್ತು ಬಿರುಗಾಳಿಯ ಎಚ್ಚರಿಕೆ.
ಅಲ್ಪಾವಧಿ (Short Range)	1 ರಿಂದ 3 ದಿನಗಳು	ದೈನಂದಿನ, ಸಾರ್ವಜನಿಕ ಚಟುವಟಿಕೆ
ಮಧ್ಯಮ ಅವಧಿ (Medium Range)	3 ರಿಂದ 10 ದಿನಗಳು	ಕೃಷಿ ಮತ್ತು ಜಲಾನಯನ ನಿರ್ವಹಣೆ.
ವಿಸ್ತೃತ ಅವಧಿ (Extended Range)	10 ರಿಂದ 30 ದಿನಗಳು	ವಾರಕ್ಕೊಮ್ಮೆಯ ಮಳೆಯ ಪ್ರವೃತ್ತಿ ತಿಳಿಯಲು.
ದೀರ್ಘಾವಧಿ (Long Range - LRF)	30 ದಿನಗಳಿಂದ ಒಂದು ಋತು	ಮಾನ್ಸೂನ್ ಮುನ್ಸೂಚನೆ ಮತ್ತು ರಾಷ್ಟ್ರೀಯ ಆರ್ಥಿಕ ಯೋಜನೆ.

ಭಾರತೀಯ ಹವಾಮಾನ ಇಲಾಖೆಯ (IMD) ವಿವಿಧ ಮುನ್ಸೂಚನಾ ಸೇವೆಗಳು ಮತ್ತು ತಂತ್ರಜ್ಞಾನ

ಹಿಂದೆ ಹೇಳಿದ ಸಮಯದ ಚೌಕಟ್ಟುಗಳನ್ನು ಮೀರಿ, IMD ವಿವಿಧ ಕ್ಷೇತ್ರಗಳ ಮತ್ತು ತೀವ್ರ ಹವಾಮಾನ ವಿದ್ಯಮಾನಗಳ ಬಗೆಗಿನ ಮಾಹಿತಿಯನ್ನು ಪಸರಿಸುವುದಕ್ಕೋಸ್ಕರ ಮುನ್ಸೂಚನೆಗೆ ಸಂಬಂಧಪಟ್ಟ ವಿಶೇಷ ಸೇವೆಗಳನ್ನು ಒದಗಿಸುತ್ತದೆ. ಸಾಗರ ಮತ್ತು ಕರಾವಳಿ ಸುರಕ್ಷತೆಗಾಗಿ, ಚಂಡಮಾರುತ ಮುನ್ಸೂಚನೆಗಳು ನಿಖರವಾದ ಟ್ರ್ಯಾಕಿಂಗ್ ಮತ್ತು ಭೂ ಸ್ಪರ್ಶ–ಲ್ಯಾಂಡ್ ಫಾಲ್ ಮುನ್ಸೂಚನೆಗಳನ್ನು ಒದಗಿಸುತ್ತವೆ. ಇವು ವಾಯುಯಾನಕ್ಕೂ ಬೇಕು. ಈ ಮುನ್ಸೂಚನೆಗಳು ಗಾಳಿಯ ವೇಗ, ಗೋಚರತೆಗೆ ಸಂಬಂಧಪಟ್ಟ ಮಾಹಿತಿಗಳನ್ನು ಒದಗಿಸುವ ಮೂಲಕ ವಿಮಾನ ಉಡ್ಡಯನದ ಸುರಕ್ಷತೆಯನ್ನು ಖಾತ್ರಿಪಡಿಸುತ್ತವೆ. ಕೃಷಿಯೇ ಆರ್ಥಿಕತೆಯ ಜೀವಾಳವಾಗಿರುವ ಭಾರತದಂತಹ ದೇಶಗಳಿಗೆ ಕೃಷಿ–ಹವಾಮಾನ ಸೇವೆಗಳು ಜಿಲ್ಲಾ ಮಟ್ಟದ ಬುಲೆಟಿನ್‌ಗಳನ್ನು ಒದಗಿಸುತ್ತವೆ. ಇವು ಬಿತ್ತನೆ ಮತ್ತು ಕೊಯ್ಲಿನಂತಹ ನಿರ್ಣಾಯಕ ಸಂದರ್ಭಗಳಲ್ಲಿ ಹವಾಮಾನದ ಬಗ್ಗೆ ರೈತರಿಗೆ ಮಾರ್ಗದರ್ಶನ ನೀಡುತ್ತವೆ. ಇದಲ್ಲದೆ, IMD ಬಿಸಿಗಾಳಿ ಮತ್ತು ಶೀತ ಅಲೆಯ ಎಚ್ಚರಿಕೆಗಳನ್ನೂ ನೀಡುತ್ತದೆ. ಇಲಾಖೆಯು ಜಲ ಪ್ರವಾಹ ಮೇಲ್ವಿಚಾರಣೆ ಮತ್ತು ನದಿ ನೀರಿನ ಮಟ್ಟದ ನಿರ್ವಹಣೆಗೆ ಅತ್ಯಗತ್ಯವಾದ ಪರಿಮಾಣಾತ್ಮಕ ಮಳೆ ಮುನ್ಸೂಚನೆಗಳನ್ನು (QPF) ಒದಗಿಸಲು ಜಲ ವಿಜ್ಞಾನ ಇಲಾಖೆಗಳೊಂದಿಗೆ ಸಹಕರಿಸುತ್ತದೆ.

ಈ ವೈವಿಧ್ಯಮಯ ಮುನ್ಸೂಚನೆಗಳ ನಿಖರತೆಯು ಹೆಚ್ಚಿನ, ಅತ್ಯುತ್ತಮ –ರೆಸಲ್ಯೂಶನ್ ನ್ಯೂಮೆರಿಕಲ್ ವೆದರ್ ಪ್ರೆಡಿಕ್ಷನ್ ಮಾದರಿಗಳು ಮತ್ತು ಅತ್ಯಾಧುನಿಕ ವೀಕ್ಷಣಾ ತಂತ್ರಜ್ಞಾನಗಳ ಸಹಾಯದಿಂದ ಆಗುವುದು. ಭಾರತೀಯ ಹವಾಮಾನ ಇಲಾಖೆಯು ಇನ್ಸಾಟ್ –3D ಉಪಗ್ರಹ ಸರಣಿ ಮತ್ತು ಡಾಪ್ಲರ್ ಹವಾಮಾನ ರಾಡಾರ್‌ಗಳ ವಿಸ್ತೃತ ಜಾಲದಿಂದ ಮುನ್ಸೂಚನೆಗೆ ದತ್ತವನ್ನು ಸಂಯೋಜಿಸುತ್ತದೆ. GFS ಎಂಬ ಜಾಗತಿಕ ಮುನ್ಸೂಚನಾ ವ್ಯವಸ್ಥೆಯ ಮಾದರಿಯು ಅಲ್ಪಾವಧಿ ಮುನ್ಸೂಚನೆಗಳನ್ನು ನಿರ್ವಹಿಸಿದರೆ, CFS v2 ಎಂಬ ಹವಾಮಾನ ಮುನ್ಸೂಚನಾ ವ್ಯವಸ್ಥೆ ವಿಸ್ತೃತ ಮತ್ತು ಋತುಗಳಿಗೆ ಬೇಕಾದ ಮುನ್ಸೂಚನೆಗಳಿಗೆ ಬಳಸಲ್ಪಡುತ್ತದೆ.



2003ರಿಂದ, ಭಾರತೀಯ ಹವಾಮಾನ ಇಲಾಖೆಯು ನೈಋತ್ಯ ಮಾನ್ಸೂನ್ ಋತುವಿನ (ಜೂನ್–ಸೆಪ್ಟೆಂಬರ್) ದೇಶಾದ್ಯಂತ ಸರಾಸರಿ ಮಳೆಯ ಕಾರ್ಯಾಚರಣಾ ದೀರ್ಘಾವಧಿ ಮುನ್ಸೂಚನೆಯನ್ನು (LRF) ಎರಡು ಹಂತಗಳಲ್ಲಿ ನೀಡುತ್ತಾ ಬಂದಿದೆ. ಮೊದಲ ಹಂತದ ಮುನ್ಸೂಚನೆಯನ್ನು ಏಪ್ರಿಲ್ ತಿಂಗಳಲ್ಲಿ ನೀಡಲಾಗುತ್ತದೆ ಮತ್ತು ಎರಡನೇ ಹಂತದ ಅಥವಾ ನವೀಕೃತ ಮುನ್ಸೂಚನೆಯನ್ನು ಮೇ ತಿಂಗಳ ಅಂತ್ಯದ ವೇಳೆಗೆ ನೀಡಲಾಗುತ್ತದೆ. 2021ರಲ್ಲಿ, IMD ಅಸ್ತಿತ್ವದಲ್ಲಿರುವ ಎರಡು–ಹಂತದ ಮುನ್ಸೂಚನಾ ತಂತ್ರವನ್ನು ಮಾರ್ಪಡಿಸುವ ಮೂಲಕ ದೇಶದಾದ್ಯಂತ ನೈಋತ್ಯ ಮಾನ್ಸೂನ್ ಮಳೆಗಾಗಿ ಮಾಸಿಕ ಮತ್ತು ಋತುಮಾನದ ಕಾರ್ಯಾಚರಣಾ ಮುನ್ಸೂಚನೆಗಳನ್ನು ನೀಡಲು ಹೊಸ ತಂತ್ರವನ್ನು ಜಾರಿಗೆ ತಂದಿದೆ. ಈ ಹೊಸ ತಂತ್ರವು ಡೈನಾಮಿಕ್ ಮತ್ತು ಸಾಂಖ್ಯಿಕ ಮುನ್ಸೂಚನಾ ವ್ಯವಸ್ಥೆ ಎರಡನ್ನೂ ಬಳಸುತ್ತದೆ. IMDಯ ಮಾನ್ಸೂನ್ ಮಿಷನ್ ಹವಾಮಾನ ಮುನ್ಸೂಚನಾ ವ್ಯವಸ್ಥೆ (MMCFS) ಸೇರಿದಂತೆ ವಿವಿಧ ಜಾಗತಿಕ ಹವಾಮಾನ ಮುನ್ಸೂಚನಾ ಕೇಂದ್ರಗಳ ಸಂಯೋಜಿತ ಜಾಗತಿಕ ಹವಾಮಾನ ಮಾದರಿಗಳನ್ನು (CGCMs) ಆಧರಿಸಿದ ಬಹು–ಮಾದರಿ ಸಮಗ್ರ (MME) ಮುನ್ಸೂಚನಾ ವ್ಯವಸ್ಥೆಯನ್ನು ಡೈನಾಮಿಕ್ ಮುನ್ಸೂಚನಾ ವ್ಯವಸ್ಥೆಯಲ್ಲಿ ಬಳಸಲಾಗುತ್ತದೆ. ಆರು ಗಂಟೆಗಳ ಎಚ್ಚರಿಕೆಯಾಗಲಿ ಅಥವಾ ನಾಲ್ಕು ತಿಂಗಳ ಋತುಮಾನದ ಪ್ರವೃತ್ತಿಯಾಗಲಿ, ಮುನ್ಸೂಚನಾ ವ್ಯವಸ್ಥೆಯು ಭಾರತದ ವೈವಿಧ್ಯಮಯ ಹವಾಮಾನ ಸವಾಲುಗಳಿಗೆ ದೃಢವಾದ, ದತ್ತಾಂಶ ಪೂರಿತ ಮತ್ತು ಸದಾ ಸ್ಪಂದಿಸುವ ವಿಶ್ವಾಸಾರ್ಹತೆಯನ್ನು ಉಳಿಸಿಕೊಂಡು ಬಂದಿದೆ.

ಶಾಲಾ ಹಾಗೂ ಸ್ಪರ್ಧಾತ್ಮಕ ವಿದ್ಯಾರ್ಥಿಗಳಿಗೆ ಅನುಕೂಲ ಆಗಲೆಂದು ಕಂಪ್ಯೂಟರ್ ವಿಷಯಕ್ಕೆ ಸಂಬಂಧಿಸಿದ ಪ್ರಶ್ನೋತ್ತರಗಳು..



ಕಂಪ್ಯೂಟರ್ ಜ್ಞಾನ

ಚಿರು ನವೋದಯ ತರಬೇತಿ ಕೇಂದ್ರ
94805 91971

19. ಇಮೇಲ್ ಶಿರೋಲೇಖವು ಈ ಕೆಳಗಿನ ಯಾವ ವರ್ಗಗಳನ್ನು ಒಳಗೊಳ್ಳುತ್ತದೆ?

(a) ಗೆ (to) (b) ಉಳಿಸು (save)
(c) cc (d) bcc

ಕೆಳಗಿನವುಗಳಲ್ಲಿ ಸರಿಯಾದ ಆಯ್ಕೆಗಳನ್ನು ಆರಿಸಿ:

1) (a), (b) ಮತ್ತು (c) ಸರಿಯಾಗಿದೆ
2) (b), (c) ಮತ್ತು (d) ಸರಿಯಾಗಿದೆ
3) (a), (b) ಮತ್ತು (d) ಸರಿಯಾಗಿದೆ
4) (a), (c) ಮತ್ತು (d) ಸರಿಯಾಗಿದೆ

ಉತ್ತರ: 4) (a), (c) ಮತ್ತು (d) ಸರಿಯಾಗಿದೆ

ವಿವರಣೆ: ಇ–ಮೇಲ್ ಶಿರೋಲೇಖವು (E–mail header) to, cc, bcc ಯನ್ನು ಒಳಗೊಳ್ಳುತ್ತದೆ.

20. ಕೆಳಗಿನದರಿಂದ ಸರಿಯಾದುದನ್ನು ಆರಿಸಿ: MIME ವಿಸ್ತರಣೆ

1) ಮಲ್ಟಿಪರ್ಪಸ್ ಇಂಟ್ರಾನೆಟ್ ಮೇಲ್ ಎಕ್ಸ್‌ಟೆನ್ಸನ್
2) ಮಲ್ಟಿಪರ್ಪಸ್ ಇಂಟರ್‌ನೆಟ್ ಮೇಲ್ ಎಕ್ಸ್‌ಟೆನ್ಸನ್
3) ಮಲ್ಟಿಯೂಸರ್ ಇಂಟ್ರಾನೆಟ್ ಮೇಲ್ ಎಕ್ಸ್‌ಟೆನ್ಸನ್
4) ಮಲ್ಟಿಯೂಸರ್ ಇಂಟರ್‌ನೆಟ್ ಮೇಲ್ ಎಕ್ಸ್‌ಟೆನ್ಸನ್

ಉತ್ತರ: 2) ಮಲ್ಟಿಪರ್ಪಸ್ ಇಂಟರ್‌ನೆಟ್ ಮೇಲ್ ಎಕ್ಸ್‌ಟೆನ್ಸನ್

ವಿವರಣೆ: MIME → Multipurpose Internet Mail Extension.

21. _____ ನೋಟವು ಮುದ್ರಿಸಲು ಹಿಂದಿರುವ ಜಾರು ಫಲಕಗಳ ಕ್ರಮದ ವ್ಯವಸ್ಥೆಗೆ ಬಳಕೆದಾರರನ್ನು ಅನುಮತಿಸುವ ಜಾರುಫಲಕದ ಸೂಚ್ಯಚಿತ್ರ ನೋಟಗಳನ್ನು ಒದಗಿಸುತ್ತದೆ. ಆದ್ದರಿಂದ _____ ನೋಟವು ಪುಟ ಪ್ರಮುಖವಾದ ವಸ್ತುವಿಷಯವನ್ನು ಮಾತ್ರ ತೋರಿಸುವುದಕ್ಕೆ ಜಾಹೀರಾತು ಕಿರುಲೇಖಗಳು ಇತ್ಯಾದಿಯಂಥ ಜಾಲಪುಟದ ಮೇಲಿರುವ ಎಲ್ಲಾ ಅಪಕರ್ಷಣೆಗಳನ್ನು ತೆಗೆದು ಹಾಕುತ್ತದೆ.

1) ಜಾರುಫಲಕ ವಿಂಗಡಣೆ, ವಾಚನ
2) ರೂಪರೇಖೆ, ಸಾಮಾನ್ಯ
3) ವಾಚನ, ಸಾಮಾನ್ಯ
4) ಜಾರುಫಲಕ ವಿಂಗಡಣೆ, ರೂಪರೇಖೆ

ಉತ್ತರ: 1) ಜಾರುಫಲಕ ವಿಂಗಡಣೆ, ವಾಚನ

ವಿವರಣೆ: ಜಾರುಫಲಕ ವಿಂಗಡನೆ (slidesorter), ವಾಚನ (Reading).

ಮುಂದುವರಿಯುತ್ತದೆ..

ಕನ್ನಡ ಕಲಿ

ಡಾ. ಶಿವಾನಂದ ಟವಳಿ
shivu.tavali@gmail.com

ಬಹುಮುಖ್ಯ ವಸ್ತುನಿಷ್ಠ ಪ್ರಶ್ನೆಗಳು

1. 'ಓವನಿಗೆ' ಎಂಬುದು ಈ ಪ್ರಕಾರದ ಹಾಡಾಗಿರಲು ಸಾಧ್ಯ

ಎ. ಕುಟ್ಟುವ ಹಾಡು ಬಿ. ಕೇರುವ ಹಾಡು
ಸಿ. ಬೀಸುವ ಹಾಡು
ಡಿ. ಮೇಲಿನ ಈ ಯಾವೊಂದು ಅಲ್ಲ

2.'ಭುವನೈಕ ರಾಮಾಭ್ಯುದಯ' ವು ಈ ದೊರೆಯನ್ನು ಕುರಿತು ಹೇಳಿದ ಕೃತಿ

ಎ. ಎರಡನೆಯ ತೈಲಪ ದೊರೆ ಬಿ. ಆರನೆಯ ವಿಕ್ರಮಾದಿತ್ಯ
ಸಿ. ನೃಪತುಂಗ ಡಿ. ರಾಷ್ಟ್ರಕೂಟ ಕೃಷ್ಣ

3. 'ಕ್ಲಿಪ್ ಜಾಯಿಂಟ್' ಈ ಸಣ್ಣಕತೆಗಾರರದು

ಎ. ಶಾಂತಿನಾಥ ದೇಸಾಯಿ ಬಿ. ರಾಘವೇಂದ್ರ ಖಾಸನೀಸ್
ಸಿ. ಕೆ.ಸದಾಶಿವ ಡಿ. ಯು.ಆರ್. ಅನಂತಮೂರ್ತಿ

4. ಕನ್ನಡದ ಮೊಟ್ಟ ಮೊದಲಿನ ಅಸಂಗತ ನಾಟಕ

ಎ. ಬೊಕ್ಕತಲೆಯ ನರ್ತಕಿ ಬಿ. ಎಲ್ಲಿಗೆ
ಸಿ. ತೆರೆಗಳು ಡಿ. ಕುಂಟಾಕುಂಟಾ ಕುರವತ್ತಿ

5.'ಯತಿವಿಲಂಘನದಿಂದರೆದಲ್ತೆ ಕನ್ನಡಂ' ಎಂಬುದು ಈ ಗ್ರಂಥದಲ್ಲಿದೆ

ಎ. ಕವಿರಾಜಮಾರ್ಗ ಬಿ. ಛಂಧೋಂಬುಧಿ
ಸಿ. ಛಂದಸ್ಸಾರ ಡಿ. ಶಬ್ದಮಣಿದರ್ಪಣ

6. ಪಂಪನ ತಾಯಿಯ ತವರು ಮನೆಯ ಮೇಲೆ ಬೆಳಕು ಚೆಲ್ಲುವ ಶಾಸನ

ಎ. ಗಂಧಾಧರಂ ಬಿ. ಅರ್ಜುನವಾಡ
ಸಿ. ಲಕ್ಕುಂಡಿ ಡಿ. ಕುರ್ಕ್ಯಾಲ

7. 'ಉರಿವ ನಾಲಗೆ'ಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಬಹುಮಾನಿತ ಲೇಖಕ

ಎ. ಗಂಗಾಧರ ಬಿ. ಕೆ.ಡಿ.ಕುರ್ತಕೋಟಿ
ಸಿ. ಚೆನ್ನಣ್ಣ ವಾಲೀಕರ ಡಿ. ಎಚ್.ಎಂ.ಚೆನ್ನಯ್ಯ

8. 'ಬೆಳುಗಲಿ 300'ರ ಕನ್ನಡ ಪ್ರಾಂತೀಯ ಕವಿ

ಎ. ಕುಮಾರವ್ಯಾಸ ಬಿ. ಪಂಪ
ಸಿ. ರನ್ನ ಡಿ. ನಾಗಚಂದ್ರ

9. ಪಂಪ ಕವಿಯ ಗುರುವಿನ ಹೆಸರು

ಎ. ಸಮಂತಭದ್ರ ಬಿ. ದೇವೇಂದ್ರ ಮುನಿ
ಸಿ. ಜಯನಂದಿ ಭಟಾರಕ ಡಿ. ಪೂಜ್ಯಪಾದ

10. 'ಅಖಂಡೇಶ್ವರ' ಎಂಬ ಅಂಕಿತ ಈ ವಚನಕಾರನದು

ಎ. ಹಾವಿನಹಾಳು ಕಲ್ಲಿದೇವ ಬಿ. ಮಡಿವಾಳ ಮಾಚಯ್ಯ
ಸಿ. ಷಣ್ಮುಖ ಶಿವಯೋಗಿ ಡಿ. ಸ್ವತಂತ್ರ ಸಿದ್ಧಲಿಂಗ

ಉತ್ತರಗಳು: 1. [2] 2. [4] 3. [4] 4. [2] 5. [1] 6. [1] 7. [2] 8. [3] 9. [2]. 10. [3].

ಮುಂದುವರಿಯುತ್ತದೆ..

ವಿಸ್ತೃತ ದೃಷ್ಟಿಕೋನ: ಸಣ್ಣ ಅಡೆತಡೆಗಳನ್ನು ಮೀರಿ ಬೆಳೆಯುವ ವಿದ್ಯಾರ್ಥಿ ಜೀವನ

ವಿದ್ಯಾರ್ಥಿ ಜೀವನವೆಂದರೆ ಕೇವಲ ಪಾಠಪುಸ್ತಕಗಳ ಪಠಣವಲ್ಲ; ಅದು ವ್ಯಕ್ತಿತ್ವ ನಿರ್ಮಾಣದ ಅತ್ಯಂತ ಪ್ರಮುಖ ಹಂತ. ವಿಶೇಷವಾಗಿ ರಜಾದಿನಗಳು ಬಂದಾಗ, ಅದು ಕೇವಲ ವಿಶ್ರಾಂತಿಯ ಕಾಲವಲ್ಲ, ನಮ್ಮನ್ನು ನಾವು ಅರಿತುಕೊಳ್ಳುವ ಮತ್ತು ನಮ್ಮ ದೃಷ್ಟಿಕೋನವನ್ನು ವಿಸ್ತರಿಸುವ ಸುವರ್ಣಾವಕಾಶ. ಈ ಸಮಯದಲ್ಲಿ ನಾವು ನಮ್ಮ ಚಿಂತನೆಗಳನ್ನು ವಿಶಾಲಗೊಳಿಸಿ, ಸಣ್ಣ ಸಣ್ಣ ಅಡೆತಡೆಗಳಿಂದ ತೊಂದರೆಪಡುವುದನ್ನು ಬಿಟ್ಟು, ಜೀವನವನ್ನು ದೊಡ್ಡ ದೃಷ್ಟಿಯಲ್ಲಿ ನೋಡಲು ಅಭ್ಯಾಸ ಮಾಡಿಕೊಳ್ಳಬೇಕು.

ಜೀವನದಲ್ಲಿ ಸಣ್ಣ ಸಮಸ್ಯೆಗಳು, ಅಡೆತಡೆಗಳು, ನಿರಾಶೆಗಳು ಸಹಜ. ಆದರೆ ಅವುಗಳಿಗೆ ನಾವು ಕೊಡುವ ಪ್ರಾಮುಖ್ಯತೆಯೇ ನಮ್ಮ ಮನೋಭಾವವನ್ನು ನಿರ್ಧರಿಸುತ್ತದೆ. ಕೆಲವೊಮ್ಮೆ ಪರೀಕ್ಷೆಯ ಫಲಿತಾಂಶ, ಸ್ನೇಹಿತರ ಮಾತು, ಮನೆಯಲ್ಲಿನ ಸಣ್ಣ ಗಲಾಟೆಗಳು ಇವೆಲ್ಲವೂ ದೊಡ್ಡ ಸಮಸ್ಯೆಗಳಂತೆ ತೋರುತ್ತವೆ. ಆದರೆ ಒಂದು ವಿಸ್ತೃತ ದೃಷ್ಟಿಕೋನ ಹೊಂದಿದಾಗ, ಇವುಗಳ ಮಹತ್ವ ಕಡಿಮೆಯಾಗುತ್ತದೆ. ದೊಡ್ಡ ಗುರಿಗಳನ್ನು ಹೊಂದಿದ ವಿದ್ಯಾರ್ಥಿ, ಸಣ್ಣ ಅಡೆತಡೆಗಳನ್ನು ತಾತ್ಕಾಲಿಕವೆಂದು ಕಂಡು, ಮುಂದೆ ಸಾಗಲು ಕಲಿಯುತ್ತಾನೆ.

ಒಬ್ಬ ವಿದ್ಯಾರ್ಥಿ ಸಮಗ್ರ ವ್ಯಕ್ತಿಯಾಗಬೇಕಾದರೆ, ಅವನು ಕೇವಲ ಅಂಕಗಳಿಗೆ ಮಾತ್ರ ಸೀಮಿತವಾಗಿರಬಾರದು. ಜವಾಬ್ದಾರಿಯುತ ನಾಗರಿಕನಾಗುವುದು, ಆತ್ಮವಿಶ್ವಾಸದಿಂದ ಬದುಕುವುದು, ಸಮಾಜದ ಬಗ್ಗೆ ಅರಿವು ಹೊಂದುವುದು ಇವುಗಳೆಲ್ಲವೂ ಅವನ ಬೆಳವಣಿಗೆಯ ಭಾಗ. ಈ ಬೆಳವಣಿಗೆ ಏಕಾಏಕಿ ಸಂಭವಿಸುವುದಿಲ್ಲ; ಅದು ಕ್ರಮೇಣ ನಡೆಯುವ ಒಂದು ಪ್ರಕ್ರಿಯೆ. ನಮ್ಮ ವ್ಯಕ್ತಿತ್ವವು ಕುಟುಂಬ, ಸ್ನೇಹಿತರು, ಶಿಕ್ಷಕರು, ಪ್ರಕೃತಿ, ಸಮಾಜ ಮತ್ತು ನಮ್ಮ ಅನುಭವಗಳ ಒಟ್ಟುಗೂಡಿದ ಪರಿಣಾಮವಾಗಿದೆ.

ಪ್ರತಿಯೊಬ್ಬರಿಗೂ ಒಂದೇ ವಿಷಯದ ಬಗ್ಗೆ ವಿಭಿನ್ನ ಅಭಿಪ್ರಾಯಗಳಿರುತ್ತವೆ. ನಾವು ನಮ್ಮ ಅಭಿಪ್ರಾಯವನ್ನು ಮಾತ್ರ ಸರಿ ಎಂದು ಹಿಡಿದಿಡುವುದಕ್ಕಿಂತ, ಇತರರ ಅಭಿಪ್ರಾಯಗಳನ್ನು ಗೌರವಿಸುವ ಗುಣ ಬೆಳೆಸಿಕೊಳ್ಳಬೇಕು. ಇದು ನಮ್ಮ ಚಿಂತನೆಗೆ ವಿಶಾಲತೆ ನೀಡುತ್ತದೆ. ಇತರರ ದೃಷ್ಟಿಕೋನವನ್ನು ಅರ್ಥಮಾಡಿಕೊಳ್ಳುವಾಗ, ನಾವು ಸಮಸ್ಯೆಗಳನ್ನು ಬೇರೆ ರೀತಿಯಲ್ಲಿ ನೋಡಲು ಕಲಿಯುತ್ತೇವೆ. ಇದು ನಮ್ಮ ನಿರ್ಧಾರಗಳನ್ನು ಹೆಚ್ಚು ಸಮರ್ಥವಾಗಿಸುತ್ತದೆ.

ಮನೋದರ್ಪಣ
ಡಾ. ಮಹಿಮಾ ಆಚಾರ್ಯ
ಮನೋವೈದ್ಯರು
ಡಾ.ಎನ್.ಆರ್.ಆಚಾರ್ಯ ಮೆಮೋರಿಯಲ್ ಹಾಸ್ಪಿಟಲ್, ಕೋಟೇಶ್ವರ, ಕುಂದಾಪುರ

ಜೀವನದಲ್ಲಿ ಬೆಳವಣಿಗೆ ಎಂದರೆ ಕೇವಲ ಯಶಸ್ಸುಗಳ ಸರಮಾಲೆಯಲ್ಲ; ಅದು ಅನುಭವಗಳ ಸಂಗ್ರಹ. ನಾವು ಎದುರಿಸುವ ಘಟನೆಗಳು, ನಾವು ನೋಡುವುದು, ಕೇಳುವುದು, ಅನುಭವಿಸುವುದು ಇವೆಲ್ಲವೂ ನಮ್ಮ ವ್ಯಕ್ತಿತ್ವವನ್ನು ರೂಪಿಸುತ್ತವೆ. ಒಂದು ಕಾರ್ಯಕ್ರಮದಲ್ಲಿ ಭಾಗವಹಿಸುವುದು, ಒಂದು ಸಮಸ್ಯೆಯನ್ನು ಪರಿಹರಿಸಲು ಪ್ರಯತ್ನಿಸುವುದು, ಒಂದು ಸಾಮಾಜಿಕ ಕಾರ್ಯದಲ್ಲಿ ತೊಡಗುವುದು – ಇವುಗಳು ನಮ್ಮಲ್ಲಿ ಹೊಸ ಕಲಿಕೆಗಳನ್ನು ಉಂಟುಮಾಡುತ್ತವೆ.

ಬಹಳ ಬಾರಿ ನಾವು ಸವಾಲುಗಳನ್ನು ತಪ್ಪಿಸಲು ಪ್ರಯತ್ನಿಸುತ್ತೇವೆ. 'ಇದು ಕಷ್ಟ', 'ನನಗೆ ಆಗುವುದಿಲ್ಲ' ಎಂಬ ಭಾವನೆಗಳು ನಮ್ಮನ್ನು ಹಿಂದೆ ಹಿಡಿಯುತ್ತವೆ. ಆದರೆ ಈ ತಪ್ಪಿಸಿಕೊಳ್ಳುವ ಮನೋಭಾವವು ನಿಧಾನವಾಗಿ ಒಂದು ಅಭ್ಯಾಸವಾಗಿ ಬದಲಾಗುತ್ತದೆ. ಅಂತಿಮವಾಗಿ, ನಾವು ಜವಾಬ್ದಾರಿಗಳನ್ನು ಹೊರುವುದರಿಂದ ದೂರವಾಗುತ್ತೇವೆ. ಇದರಿಂದ ನಮ್ಮ ವ್ಯಕ್ತಿತ್ವದ ಬೆಳವಣಿಗೆ ತಡೆಯಲ್ಪಡುತ್ತದೆ.

ಉದಾಹರಣೆಗೆ, ಮನೆಯಲ್ಲಿನ ಒಂದು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದು ಕೇವಲ ಸಹಾಯ ಮಾಡುವುದಲ್ಲ; ಅದು ವ್ಯವಸ್ಥಾಪನೆ, ಸಂವಹನ, ಸಮಯ ನಿರ್ವಹಣೆ ಮತ್ತು ಸಹಕಾರದ ಮಹತ್ವವನ್ನು ಕಲಿಸುತ್ತದೆ. ಶಾಲೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ನಾಯಕತ್ವದ ಗುಣಗಳನ್ನು ಬೆಳೆಸುತ್ತದೆ. ಸಾಮಾಜಿಕ ಕಾರ್ಯಗಳಲ್ಲಿ ತೊಡಗುವುದು ಸಮಾಜದ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸುತ್ತದೆ. ಇವುಗಳೆಲ್ಲವೂ ಪುಸ್ತಕಗಳಲ್ಲಿ ಸಿಗದ ಅಮೂಲ್ಯ ಪಾಠಗಳು.

ಇಂತಹ ಸಂದರ್ಭಗಳಲ್ಲಿ ನಾವು ವಿವಿಧ ವಯೋಮಾನದವರೊಂದಿಗೆ, ವಿಭಿನ್ನ ಸಂಬಂಧಗಳವರೊಂದಿಗೆ, ಅಪರಿಚಿತರೊಂದಿಗೆ ಸಹ ಸಂವಹನ ನಡೆಸುತ್ತೇವೆ. ಇದು ನಮ್ಮಲ್ಲಿ ಸಂವಹನ ಕೌಶಲ್ಯವನ್ನು ಹೆಚ್ಚಿಸುತ್ತದೆ. ಜೊತೆಗೆ, ವಿಭಿನ್ನ ರೀತಿಯ ಸಮಸ್ಯೆಗಳನ್ನು ಹೇಗೆ ಎದುರಿಸಬೇಕು, ಯಾವ ರೀತಿಯಲ್ಲಿ ಪರಿಹರಿಸಬೇಕು ಎಂಬುದನ್ನು ಗಮನಿಸಿ ಕಲಿಯುವ ಅವಕಾಶ ಸಿಗುತ್ತದೆ.

ಇಲ್ಲಿ ಮುಖ್ಯವಾದುದು ಜಯ ಅಥವಾ ಸೋಲಲ್ಲ. ಭಾಗವಹಿಸುವುದು ಮತ್ತು ಅನುಭವಗಳನ್ನು ಗಳಿಸುವುದೇ ಮುಖ್ಯ. ಈ ಅನುಭವಗಳು ನಮ್ಮ ಜೀವನದ ವಿವಿಧ ಕ್ಷೇತ್ರಗಳಲ್ಲಿ ಉಪಯೋಗವಾಗುತ್ತವೆ. ಇವುಗಳೇ ನಮ್ಮ ವ್ಯಕ್ತಿತ್ವವನ್ನು, ಆತ್ಮವಿಶ್ವಾಸವನ್ನು, ನಮ್ಮ ಪಾತ್ರವನ್ನು ಮತ್ತು ನಮ್ಮ ಮನೋಭಾವವನ್ನು ರೂಪಿಸುತ್ತವೆ.

ರಜಾದಿನಗಳಲ್ಲಿ ವಿದ್ಯಾರ್ಥಿಗಳು ತಮ್ಮನ್ನು ತಾವು ಅಭಿವೃದ್ಧಿಪಡಿಸಲು ಹೊಸ ಚಟುವಟಿಕೆಗಳಲ್ಲಿ ತೊಡಗಬಹುದು – ಪುಸ್ತಕ ಓದುವುದು, ಹೊಸ ಕೌಶಲ್ಯಗಳನ್ನು ಕಲಿಯುವುದು, ಕುಟುಂಬದೊಂದಿಗೆ ಸಮಯ ಕಳೆಯುವುದು, ಸಮಾಜಮುಖಿ ಕಾರ್ಯಗಳಲ್ಲಿ ಪಾಲ್ಗೊಳ್ಳುವುದು. ಇವುಗಳು ನಮ್ಮ ಜೀವನದ ದಿಕ್ಕನ್ನು ಸ್ಪಷ್ಟಗೊಳಿಸುತ್ತವೆ.

ಕೊನೆಯಲ್ಲಿ, ಜೀವನವೆಂದರೆ ಒಂದು ನಿರಂತರ ಕಲಿಕೆಯ ಪ್ರಕ್ರಿಯೆ. ಸಣ್ಣ ಅಡೆತಡೆಗಳನ್ನು ಮೀರಿ, ದೊಡ್ಡ ದೃಷ್ಟಿಕೋನವನ್ನು ಹೊಂದಿ, ಪ್ರತಿಯೊಂದು ಅನುಭವದಿಂದ ಕಲಿಯುವ ವಿದ್ಯಾರ್ಥಿಯೇ ನಾಳೆಯ ಜವಾಬ್ದಾರಿಯುತ ನಾಗರಿಕನಾಗುತ್ತಾನೆ. ಆತ್ಮವಿಶ್ವಾಸ, ಸಹನೆ ಮತ್ತು ವಿಶಾಲ ಚಿಂತನೆ – ಇವುಗಳೊಂದಿಗೆ ನಾವು ಜೀವನವನ್ನು ಎದುರಿಸಿದಾಗ, ಯಾವುದೇ ಸವಾಲು ನಮ್ಮನ್ನು ಹಿಂಜರಿಯಿಸುವುದಿಲ್ಲ.

ವ್ಯಕ್ತಿತ್ವ ವಿಕಸನ ಎಂಬುದು ಕೇವಲ ವೈಯಕ್ತಿಕ ಬೆಳವಣಿಗೆಯಲ್ಲ, ಅದು ನಾವು ಇತರರ ಜೀವನದ ಮೇಲೆ ಬೀರುವ ಸಕಾರಾತ್ಮಕ ಪ್ರಭಾವವೂ ಹೌದು. ನಾವು ಬೆಳೆದಂತೆ ನಮ್ಮಲ್ಲಿ ಸೇವಾ ಮನೋಭಾವ ಮತ್ತು ಕೃತಜ್ಞತೆ ಮೂಡಬೇಕು. ಇತರರಿಗೆ ಸಹಾಯ ಮಾಡುವುದು, ಪರಿಸರದ ಬಗ್ಗೆ ಕಾಳಜಿ ವಹಿಸುವುದು ಮತ್ತು ಸಣ್ಣ ಸಣ್ಣ ತಪ್ಪುಗಳನ್ನು ಕ್ಷಮಿಸುವುದನ್ನು ಕಲಿಯುವುದು ನಮ್ಮ ಮಾನಸಿಕ ಸ್ಥಿತಿಯನ್ನು ಉನ್ನತ ಮಟ್ಟಕ್ಕೇರಿಸುತ್ತದೆ. ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಕೇವಲ ವೇಗವಾಗಿ ಓಡುವುದು ಮುಖ್ಯವಲ್ಲ, ಬದಲಿಗೆ ಪ್ರೀತಿ ಮತ್ತು ಮಾನವೀಯತೆಯೊಂದಿಗೆ ಎಲ್ಲರನ್ನು ಒಳಗೊಂಡು ಸಾಗುವುದು ಮುಖ್ಯ. ಈ ವಿಶಾಲ ಮನೋಭಾವವೇ ಒಬ್ಬ ಸಾಮಾನ್ಯ ವಿದ್ಯಾರ್ಥಿಯನ್ನು ಅಸಾಮಾನ್ಯ ವ್ಯಕ್ತಿಯನ್ನಾಗಿ ರೂಪಿಸುತ್ತದೆ.

480 ವಿದ್ಯಾರ್ಥಿ ಬಂಧ

ರಾಜಾ ಸಂಗಮೇಶ ಎನ್. ಹಿರೇಮಠ



ಎಡದಿಂದ ಬಲಕ್ಕೆ

1. ಸಾಹಸದಿಂದ ಇಳಿದದ್ದು ಈ ಕೊಳದಲ್ಲಿ (3)
5. ಶರ ಹಿಡಿದು ಬಂದ ಬೇಡ ತಿರುಗಿ ಕುಳಿತಿದ್ದಾನೆ (3)
6. ಅಪಾರ–ಹೇರಳತೆಯನ್ನು ಹೀಗೆನ್ನುತ್ತೇವೆ (3)
8. ಸಲದ ನಡುವೆ ಒಳ್ಳೆಯ ಸಮಯವಿದೆ (3)
10. ಗಟ್ಟಿಯಾಗಿ ಕೂಗು ಎಂಬರ್ಥದ ಶಬ್ದ (3)
12. ಗಡದ ಕಡೆಗೆ ಹೋದದ್ದು ಹೀಗೆ ಜೊತೆಯಲ್ಲಿಯೆ!(3)
13. ಅಳುವುದು–ಗೋಳಾಡುವುದು (3)
14. ಒಂದೇ ಕುಲ–ವಂಶವಿದು (3)

ಮೇಲಿನಿಂದ ಕೆಳಕ್ಕೆ

2. ನೇರವಾದ, ವಕ್ರವಿಲ್ಲದ್ದು (3)
3. ಆಯುಧಗಳಿಂದ ಕೂಡಿದ್ದು ತಲೆಕೆಳಗಾಗಿದೆ (3)
4. ಪ್ರಬಲದ ವಿರುದ್ಧ ಪದ (3)
7. ಹಬ್ಬು–ಎಲ್ಲೆಡೆ ವ್ಯಾಪಿಸುವಿಕೆಯಿದು (3)
9. ಪಾಳೆಯಗಳ ನಡುವೆ ನಡೆವ ಹೋರಾಟ (3)
10. ಚಿಕ್ಕಗಾತ್ರದ ನಮ್ಮ ಸುತ್ತಮುತ್ತ ಕಾಣುವ ಹಕ್ಕಿ (3)
11. ಯಾವುದೇ ಗುಣ–ಸ್ಥಿತಿ ತಿಳಿಸುವ ಸಂಕೇತ (3)
12. ಮನದಲ್ಲಾಗುವ ಆನಂದದ ಭಾವ (3)

ಹಿಂದಿನ ಸಂಚಿಕೆ ಉತ್ತರ

ಎಡದಿಂದ ಬಲಕ್ಕೆ: 1.ಕಾಲ 3.ಭಾರತೀಯ 5.ಸಾವಿರ 7.ಜವ್ವನ 8.ಗಮನ 9.ಸಾದರ 11.ಯಶಸ್ಕರ 12.ಗುಟ್ಟು
ಮೇಲಿನಿಂದ ಕೆಳಕ್ಕೆ: 2.ಸಾಲ 3.ಭಾರ 4.ಯಕ್ಷಗಾನ 6.ವಿಧಾನ 7.ಜಲಾಶಯ 8.ಗದ್ಗದ 9.ಸಾರ 10.ರಟ್ಟು

ಬಡವನ ಮಾಗಿ ಉಳುಮೆಯು ಸಾಹುಕಾರನ ಗೊಬ್ಬರಕ್ಕೆ ಸಮ

ಗಾದೆ ವಿಶ್ಲೇಷಣೆ

'ಬಡವನ ಮಾಗಿ ಉಳುಮೆಯು ಸಾಹುಕಾರನ ಗೊಬ್ಬರಕ್ಕೆ ಸಮ' ಎಂಬ ಈ ಗಾದೆ ಮಾತು ಸಮಾಜದ ಆರ್ಥಿಕ ಅಸಮಾನತೆಯ ಮೌಲಿಕ ಸತ್ಯವನ್ನು ಪ್ರತಿಬಿಂಬಿಸುತ್ತದೆ. ಒಬ್ಬ ಬಡ ಕೃಷಿ ಕಾರ್ಮಿಕ ತನ್ನ ಜೀವನೋಪಾಯಕ್ಕಾಗಿ ಕಷ್ಟಪಟ್ಟು ಹೊಲದಲ್ಲಿ ದುಡಿದರೂ ಸಹಿತ, ಅವನ ಪರಿಶ್ರಮದ ಫಲವು ಹೆಚ್ಚಾಗಿ ಸಿರಿವಂತರ ಲಾಭಕ್ಕೆ ಹೋಗುತ್ತದೆ.

ಕಾಯಕ ತತ್ವದಡಿ ಕೃಷಿ ಕಾರ್ಮಿಕನ ಆ ಶ್ರಮವು ಅವನ ಬದುಕಿಗೆ ಮೂಲಸ್ತಂಭವಾದರೂ ಕೂಡ, ಆ ಶ್ರಮದ ಪ್ರತಿಫಲ ಹೆಚ್ಚಾಗಿ ಸಿರಿವಂತರ ಪಾಲು (ಗೊಬ್ಬರ) ಆಗುತ್ತದೆ. ಹಾಗೆ ನೋಡಿದರೆ ಇದು ಶ್ರಮ ಮತ್ತು ಫಲದ ಅಸಮತೋಲನವನ್ನು ಸೂಚಿಸುತ್ತದೆ. ದುಡಿಯುವವನು ಇದ್ದಲ್ಲಿಯೇ ಇರುತ್ತಾನೆ; 'ಆರಕ್ಕೆ ಏರದ, ಮೂರಕ್ಕೆ ಇಳಿಯದ' ಪರಿಸ್ಥಿತಿ ಅವನದು. ಇದರ ಲಾಭ ಪಡೆದುಕೊಳ್ಳುವ ಶ್ರೀಮಂತ ಇನ್ನಷ್ಟು ಶ್ರೀಮಂತನಾಗುತಲೇ ಹೋಗುತ್ತಾನೆ. ಅಂದರೆ, ಇಲ್ಲಿ ಶ್ರಮದ ಮೌಲ್ಯಕ್ಕಿಂತ ಸಂಪತ್ತಿನ ಪ್ರಭಾವವೇ ಹೆಚ್ಚು ಎಂಬ ಸತ್ಯ ಬೆಳಕಿಗೆ ಬರುತ್ತದೆ. ಸಾಮಾಜಿಕ ವ್ಯವಸ್ಥೆಯಲ್ಲಿ ನ್ಯಾಯಯುತವಾದ ಹಂಚಿಕೆ ಇಲ್ಲದಿದ್ದರೆ ಬಡವ ಬಡವನಾಗಿಯೇ ಬದುಕಬೇಕಾಗುತ್ತದೆ. ಈತನ ದುಡಿಮೆ ಸದಾ ಬೇರೆಯವರ ಸಂಪತ್ತಿಗೆ ಬಲವಾಗುತ್ತಾ ಹೋಗುತ್ತದೆ. ಈ ಗಾದೆಯನ್ನು ಇನ್ನಷ್ಟು ತಾತ್ವಿಕ ದೃಷ್ಟಿಯಿಂದ ನೋಡಿದರೆ, ಇದು ಕೇವಲ ಆರ್ಥಿಕ ಸ್ಥಿತಿಗೆ ಸಂಬಂಧಪಟ್ಟ ಮಾತಲ್ಲ; ಪರೋಕ್ಷವಾಗಿ ನ್ಯಾಯ–ಅನ್ಯಾಯಗಳ ಸೂಕ್ಷ್ಮ ಚಿತ್ರಣದ ಮೇಲೆ ಬೆಳಕು ಚೆಲ್ಲುತ್ತದೆ. ಅಂದರೆ ಕಾರ್ಯ ಮಾಡುವುದು ಒಂದು ಕೈ ಆದರೆ, ಫಲ ಸೇರುವುದು ಇನ್ನೊಂದು ಕೈಗೆ. 'ದುಡಿದವರು ಯಾರು ಹಾಗೂ ಫಲ ಅನುಭವಿಸುವವರು ಯಾರು?' ಎಂಬ ಪ್ರಶ್ನೆಗಳಿಗೆ ಸರಿಯಾದ ಉತ್ತರ ಸಿಗದಿದ್ದರೆ ಅಲ್ಲಿ ಅಸಮತೋಲನ ಉಂಟಾಗುವುದು ಸಹಜ. ಇಲ್ಲಿ ಬಡ ಕೃಷಿ ಕಾರ್ಮಿಕನ ಶ್ರಮವು ನಿಸ್ವಾರ್ಥ ಸೇವೆಯಂತಾಗಿರುತ್ತದೆ. ನಿಸ್ವಾರ್ಥ ಸೇವೆಯನ್ನು ಸಲ್ಲಿಸುವ ಆತ ತನ್ನ ಶಕ್ತಿಯನ್ನು ಭೂತಾಯಿಗೆ ಸಮರ್ಪಿಸುತ್ತಾನೆ. ಆದರೆ ಇದರ ಫಲ ಅನುಭವಿಸುವವರು ಶ್ರಮದ ಗಂಧ–ಗಾಳಿ ಇಲ್ಲದವರು. ಶ್ರಮವು ಧರ್ಮದಿಂದ ಕೂಡಿದ್ದರೂ ಅದರ ಪ್ರತಿಫಲ ನ್ಯಾಯಯುತವಾಗಿರುತ್ತದೆ ಎಂಬುದು ಪ್ರಸ್ತುತ ಸಾಮಾಜಿಕ ವ್ಯವಸ್ಥೆಯಲ್ಲಿ ನಂಬಲಾರದ ಸಂಗತಿ.

▪ **ಗುರುನಾಥ ಸುತಾರ**
। ಹುಲ್ಯಾಳ

ಸಾಮಾನ್ಯ ಮಾದರಿ ಪ್ರಶ್ನೋತ್ತರ

79. ಭಾರತದಲ್ಲಿ ಹಂಚಿಕೆಯಾಗಿರುವ ಮಣ್ಣಿಗೆ ಸಂಬಂಧಿಸಿದೆ. ಜಾಸ್ತಿಯಿಂದ ಕಡಿಮೆಗೆ ಸಂಬಂಧಿಸಿದಂತೆ ಜಾಸ್ತಿಯಿಂದ ಕಡಿಮೆಗೆ ಇಳಿಕೆ ಕ್ರಮದಲ್ಲಿ ಬರೆಯಿರಿ?

ಎ) ಮೆಕ್ಕಲು ಮಣ್ಣು, ಕಪ್ಪುಮಣ್ಣು, ಕೆಂಪುಮಣ್ಣು, ಪರ್ವತ ಮಣ್ಣ, ಲ್ಯಾಟರೈಟ್ ಮಣ್ಣು
ಬಿ) ಕಪ್ಪು, ಕೆಂಪು, ಮೆಕ್ಕಲು, ಪರ್ವತ, ಲ್ಯಾಟ್‌ರೈಟ್
ಸಿ) ಕೆಂಪು, ಮೆಕ್ಕಲು, ಕಪ್ಪು, ಪರ್ವತ, ಲ್ಯಾಟ್‌ರೈಟ್
ಡಿ) ಮೇಲಿನ ಯಾವುದೂ ಅಲ್ಲ

80. ಉಷ್ಣವಲಯದ ನಿತ್ಯ ಹರಿದ್ವರ್ಣದ ಕಾಡುಗಳು ಎಷ್ಟು ಸೆಂ.ಮೀಗಳಿಗಿಂತ ಹೆಚ್ಚು ಮಳೆಯಾಗುವ ಭಾಗಗಳಲ್ಲಿ ಕಂಡುಬರುತ್ತದೆ?

ಎ) 100 ಸೆಂ.ಮಿ
ಬಿ) 200 ಸೆಂ.ಮೀ
ಸಿ) 250 ಸೆಂ.ಮೀ
ಡಿ) 500 ಸೆಂ.ಮೀ

81. ಯಾವುದು 'ಪರ್ಣಪಾತಿ ಅರಣ್ಯ' ಎಂತಲೂ ಮತ್ತು ಮಾನ್ಸೂನ್ ಕಾಡುಗಳು ಎಂತಲೂ ಕರೆಯುವರು?

ಎ) ಕುರುಚಲು ಸಸ್ಯ
ಬಿ) ಉಷ್ಣವಲಯದ ನಿತ್ಯ ಹರಿದ್ವರ್ಣ ಕಾಡುಗಳು
ಸಿ) ಉಷ್ಣವಲಯದ ಎಲೆ ಉದುರಿಸುವ ಕಾಡುಗಳು
ಡಿ) ಪರ್ವತ ಕಾಡುಗಳು

82. ಈ ಕೆಳಕಂಡ ಯಾವ ರಾಜ್ಯದಲ್ಲಿ ಅತಿ ಕಡಿಮೆ ಅರಣ್ಯ ಪ್ರದೇಶವಿದೆ?

ಎ) ರಾಜಸ್ಥಾನ
ಬಿ) ಗೋವಾ
ಸಿ) ಸಿಕ್ಕಿಂ
ಡಿ) ಗುಜರಾತ್

83. ಯಾವ ನದಿ ಮುಖಜ ಭೂಮಿಯಲ್ಲಿರುವ ಮ್ಯಾಂಗ್ರೋವ್ ಕಾಡುಗಳಲ್ಲಿ ಸುಂದರಿ ಎಂಬ ಮರ ವ್ಯಾಪಾಕವಾಗಿ ಹಂಚಿಕೆಯಾಗಿದೆ. ಹೀಗಾಗಿ ಈ ಮುಖಜ ಭೂಮಿಯನ್ನು 'ಸುಂದರ ಬನ' ಎಂದು ಕರೆಯಲಾಗಿದೆ?

ಎ) ಸಿಂಧೂ
ಬಿ) ಗಂಗಾ
ಸಿ) ಬ್ರಹ್ಮಪುತ್ರಾ
ಡಿ) ಗೋದಾವರಿ

84. ವನ್ಯ ಜೀವಿಧಾಮ ಕುರಿತು ಈ ಕೆಳಗಿನವುಗಳಲ್ಲಿ ಯಾವುದು ಸರಿಯಾಗಿ ಹೊಂದಾಣಿಕೆಯಾಗಿದೆ?

1) ನಾಗಾರ್ಜುನ ಸಾಗರ – ತಲಂಗಾಣ
2) ಜಲ್ದಪಾರ – ಪಶ್ಚಿಮ ಬಂಗಾಳ
3) ಭರತ್ ಪುರ – ರಾಜಸ್ಥಾನ
4) ಮಧುಮಲೈ– ತಮಿಳುನಾಡು

ಮುಂದುವರಿಯುತ್ತದೆ...

ಉತ್ತರಗಳು: 79–ಎ, 80–ಸಿ, 81–ಸಿ, 82–ಬಿ, 83–ಬಿ, 84–ಡಿ.

ಚಾಣಕ್ಯ ಕರಿಯರ್ ಅಕಾಡೆಮಿ, ವಿಜಯಪುರ. ಫೋನ್ ನಂ: 9880957562, 08352–222197

ರಾಜ್ಯ ಮತ್ತು ಕೇಂದ್ರ ಸರ್ಕಾರಿ ಪರೀಕ್ಷೆ - ಪ್ರಚಲಿತ ಘಟನೆಗಳು

1. ಇತ್ತೀಚೆಗೆ ನಿವೃತ್ತಿ ಘೋಷಿಸಿದ ಲಲಿತ್ ಉಪಾಧ್ಯಾಯ ಅವರು ಯಾವ ಕ್ರೀಡೆಯೊಂದಿಗೆ ಸಂಬಂಧ ಹೊಂದಿದ್ದಾರೆ?

[ಎ] ಹಾಕಿ
[ಬಿ] ಫುಟ್ಬಾಲ್
[ಸಿ] ಬಾಕ್ಸಿಂಗ್
[ಡಿ] ಬ್ಯಾಡ್ಮಿಂಟನ್

2. ಇತ್ತೀಚೆಗೆ ಸುದ್ದಿಯಲ್ಲಿ ಕಾಣಿಸಿಕೊಂಡ 'ಪುಷ್ಕರ್ಮೇಮ ಕುರಾಜೆ' ಎಂದರೇನು?

[ಎ] ಹೊಸದಾಗಿ ಪತ್ತೆಯಾದ ಸೈನೋ ಬ್ಯಾಕ್ಟೀರಿಯಾ ಪ್ರಭೇಧಗಳು
[ಬಿ] ಆಕ್ರಮಣಕಾರಿ ಕಳೆ
[ಸಿ] ಅಪರೂಪದ ಔಷಧೀಯ ಸಸ್ಯ
[ಡಿ] ಹೊಸದಾಗಿ ಪತ್ತೆಯಾದ ಮೀನು ಪ್ರಭೇಧಗಳು

3. ಐಎನ್‌ಎಸ್ ಕಲ್ವೇನಿಯನ್ನು ಯಾವ ಹಡಗು ಕಟ್ಟೆಯನ್ನು ನಿರ್ಮಿಸಿದೆ?

[ಎ] ಮಜಗಾನ್ ಡಾಕ್ ಶಿಪ್‌ಬಿಲ್ಡರ್ಸ್ ಲಿಮಿಟೆಡ್
[ಬಿ] ಕೊಚ್ಚಿನ್ ಶಿಪ್‌ಯಾರ್ಡ್ ಲಿಮಿಟೆಡ್
[ಸಿ] ಗಾರ್ಡನ್ ರೀಚ್ ಶಿಪ್‌ಬಿಲ್ಡರ್ಸ್ & ಇಂಜಿನಿಯರ್‌ಗಳು
[ಡಿ] ಹಿಂದೂಸ್ತಾನ್ ಶಿಪ್‌ಯಾರ್ಡ್ ಲಿಮಿಟೆಡ್

4. ಮಿಷನ್ ಮೌಸಮ್ ಅಡಿಯಲ್ಲಿ ಮಹಾಬಲೇಶ್ವರದಲ್ಲಿ ಯಾವ ಸಂಸ್ಥೆ ಎಕ್ಸ್–ಬ್ಯಾಂಡ್ ಡಾಪ್ಲರ್ ಹವಾಮಾನ ರಾಡಾರ್ ಅನ್ನು ಸ್ಥಾಪಿಸಿದೆ?

[ಎ] ಪ್ರಾದೇಶಿಕ ಹವಾಮಾನ ಕೇಂದ್ರ (ಆರ್‌ಎಂಸಿ), ಮುಂಬೈ
[ಬಿ] ಭಾರತೀಯ ಉಷ್ಣವಲಯದ ಹವಾಮಾನ ಸಂಸ್ಥೆ, ಪುಣೆ
[ಸಿ] ಭಾರತ ಹವಾಮಾನ ಇಲಾಖೆ (ಐಎಂಡಿ), ಪುಣೆ
[ಡಿ] ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ

5. ತ್ರಿಶೂರ್ ಪೂರಂ ಹಬ್ಬವನ್ನು ಪ್ರಮುಖವಾಗಿ ಯಾವ ರಾಜ್ಯದಲ್ಲಿ ಆಚರಿಸಲಾಗುತ್ತದೆ?

[ಎ] ಕೇರಳ
[ಬಿ] ಆಂಧ್ರಪ್ರದೇಶ
[ಸಿ] ತಮಿಳುನಾಡು
[ಡಿ] ಮಹಾರಾಷ್ಟ್ರ

6. ಭಾರತ್ ಮುನ್ಸೂಚನೆ ವ್ಯವಸ್ಥೆಯನ್ನು ಯಾವ ಸಂಸ್ಥೆ ಅಭಿವೃದ್ಧಿಪಡಿಸಿದೆ?

[ಎ] ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ), ಬೆಂಗಳೂರು
[ಬಿ] ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ), ದೆಹಲಿ
[ಸಿ] ಭಾರತೀಯ ಉಷ್ಣವಲಯದ ಹವಾಮಾನ ಸಂಸ್ಥೆ (ಐಐಟಿಎಂ), ಪುಣೆ
[ಡಿ] ರಾಷ್ಟ್ರೀಯ ದೂರಸಂವೇದಿ ಕೇಂದ್ರ, ಹೈದರಾಬಾದ್

ಮುಂದುವರಿಯುತ್ತದೆ...

ಉತ್ತರಗಳು: 1–ಎ, 2–ಎ, 3–ಸಿ, 4–ಬಿ, 5–ಎ, 6–ಸಿ.

ಮಹೇಶ ಪಟ್ಟೇದ್, ನೂತನ ಅಕಾಡೆಮಿ, ಕೊಪ್ಪಳ. ಮೊ: 96201 39001

NEET/JEE/KCET CLASSES

63. A ball of mass 10 k moving with a velocity $10\sqrt{3}$ m/s along the x-axis, hits another ball of mass 20 kg which is at rest. After the collision, first ball comes to rest while the second ball disintegrates into two equal pieces. One piece starts moving along y-axis with a speed of 10 m/s. The second piece starts moving at an angle of 30^0 with respect to the x-axis.

The velocity of the ball moving at 30^0 with x-axis is x m/s. The configuration of pieces after collision is shown in the figure below.

The value of x to the nearest integer is_________.

[JEE MAIN 2021, JEE MAIN 2021]



Continued...

Shankreppa Hosadoddi, Physics Lecture Kalaburagi. **Mob- 99025 69194**

IAS/KAS Coaching Subject : Science and Technology

72. Which of the below allow water and oils to remain mixed together?

A. Sweeteners
B. Emulsifiers
C. Bulking agents
D. Preservatives

Answer : B

Explanation :

● Emulsifiers allow water and oils to remain mixed together in an emulsion, as in mayonnaise, ice cream, and homogenized milk.

73. Consider the below statements about Genetically Modified Crops

I. More yield in less time
II. Can lead to genetic pollution
III. Helps preserve the native seeds

Which of the above are correct?

A. Only I & II
B. Only II & III
C. Only I & III
D. All of the above

Answer : A

Explanation :

● Genetically Modified crops research is considered by many to go against Nature. And the fear of unknown compounds has become a major aversive force for people to go for GM Foods.

● There is always a fear of native seeds being contaminated by GM seeds and that the threat of losing the native seed species completely, is real. Genetic pollution is a term used by scientists where there is an uncontrolled gene flow into the Native species, which results either in altering the native species at the genetic level or in the worst case that native species is lost forever.

74. How do you expand the abbreviation HTTP?

A. Higher Text Transfer Program
B. Hyper Text Transfer Protocol
C. Higher Terminal Tracking Program
D. None of the above

Answer : B

Explanation :

● HTTP stands for Hyper Text Transfer Protocol. It is a set of rules for computers to retrieve textual data from remote servers.

Continued...

Universal Coaching Centre, Vijayanagar, Bangalore. **Ph No: 080 2339 6403**

ಮಾನಸಿಕ ಸಾಮರ್ಥ್ಯ

4) 1, 4, 7, 10, 13, ... ?

ಎ. 16 ಬಿ. 17 ಸಿ. 18 ಡಿ. 19

ಉತ್ತರ : ಎ. 16

5) 1, 3, 7, 9, 13, 15, 19, ...?

ಎ. 22 ಬಿ. 23 ಸಿ. 24 ಡಿ. 21

ಉತ್ತರ : ಡಿ. 21

ಭಾಗ – 2

1) 0, 4, 8, 12, 16, 20, ...?

ಎ. 22 ಬಿ. 24 ಸಿ. 26 ಡಿ. 28

ಉತ್ತರ : ಬಿ. 24

ವಿವರಣೆ: ಮೇಲಿನ ಸರಣಿಯ ಅಂಕಿಗಳ ನಡುವಿನ ವ್ಯತ್ಯಾಸವನ್ನು ತಿಳಿಯೋಣ..



ಇಲ್ಲಿ ಸರಣಿಯ ಅಂಕಿಗಳ ನಡುವಿನ ವ್ಯತ್ಯಾಸವನ್ನು ಗಮನಿಸಿದಾಗ, ಸಂಖ್ಯೆಗಳ ನಡುವಿನ ವ್ಯತ್ಯಾಸವು ಸಂಖ್ಯೆ 4ರ ಅಂತರದಿಂದ ಮುಂದುವರಿದಿದೆಯಲ್ಲವೇ, ಹೌದು ಹೀಗೆ 4ರ ಅಂತರವನ್ನು ಮುಂದುವರಿಸಿ ಸಂಖ್ಯೆ 20ಕ್ಕೆ 4ನ್ನು ಸೇರಿದರೆ ಬರುವ ಸಂಖ್ಯೆ **24.**

2) 0, 5, 15, 30, 50, 75, ... ?

ಎ. 90 ಬಿ. 95 ಸಿ. 100 ಡಿ. 105

ಉತ್ತರ: ಡಿ. 105

ವಿವರಣೆ: ಈ ಸರಣಿಯಲ್ಲಿರುವ ಸಂಖ್ಯೆಗಳನ್ನು ನೋಡಿದರೆ ಗೊಂದಲವಾಗುವುದು ಸಹಜ, ಗೊಂದಲ ಬೇಡ ಮೊದಲು ಸರಣಿಯಲ್ಲಿರುವ ಅಂಕಿಗಳ ನಡುವಿನ ವ್ಯತ್ಯಾಸವನ್ನು ತಿಳಿಯೋಣ..



ನೋಡಿ ಎಷ್ಟು ಸರಳವಾಗಿದೆ ಅಲ್ಲವೇ.. ಈ ಸರಣಿಯಲ್ಲಿರುವ ಅಂಕಿಗಳ ನಡುವಿನ ವ್ಯತ್ಯಾಸವು ಸಂಖ್ಯೆ 5 ಮಗ್ಗಿಯ ಸಂಖ್ಯೆಗಳಾಗಿವೆ. ಅಂದರೆ 5x1=5, 5x2=10, 5x3=15, 5x4=20, 5x5=25... ಹೀಗೆ ಮುಂದುವರಿದರೆ 5x6=30 ಅನ್ನು ಸಂಖ್ಯೆ 75ಕ್ಕೆ ಕೂಡಿದರೆ 105 ಬರುತ್ತದೆ.

ಮುಂದುವರಿಯುತ್ತದೆ...

JICE IAS ACADEMY SUCCESS ASSURED BENGALURU, Mob- 76761 67901

PSI/CAR/Civil Police Constable

11. ವಿಶ್ವ ಅರಣ್ಯಗಳ ವರದಿ 2024ರ ಕುರಿತು, ಈ ಕೆಳಗಿನ ಯಾವ ಹೇಳಿಕೆಗಳು ಸರಿಯಾಗಿದೆ?

ಎ) ಇದನ್ನು ವಿಶ್ವ ವನ್ಯಜೀವಿ ನಿಧಿಯಿಂದ ಬಿಡುಗಡೆ ಮಾಡಲಾಗಿದೆ

ಬಿ) ಈ ವರ್ಷದ ಥೀಮ್ 'ನಾವೀನ್ಯತೆ ಮೂಲಕ ಅರಣ್ಯ ಪರಿಹಾರಗಳನ್ನು ವೇಗಗೊಳಿಸುವುದು'

ಸಿ) ಅರಣ್ಯ ಪ್ರದೇಶ ಹೊಂದಿರುವುದರಲ್ಲಿ ಭಾರತವು ಜಾಗತಿಕವಾಗಿ ನಾಲ್ಕನೇ ಸ್ಥಾನದಲ್ಲಿದೆ

ಡಿ) ಮೇಲಿನ ಎಲ್ಲವೂ

12. ಭಾರತದಲ್ಲಿ ಏಳು ಸಹೋದರಿಯರ ರಾಜ್ಯಗಳನ್ನು ಹೊರತುಪಡಿಸಿ, ಡಿಸೆಂಬರ್ 31, 2023ರ ವರೆಗೆ ಎಷ್ಟು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ವಿಶೇಷ ವರ್ಗದ ಸ್ಥಾನಮಾನವನ್ನು ಹೊಂದಿವೆ?

ಎ) ಒಂದು ಬಿ) ಎರಡು

ಸಿ) ಮೂರು ಡಿ) ನಾಲ್ಕು

13. ಕೆಳಗಿನ ವಿಧಿಗಳನ್ನು ಪರಿಗಣಿಸಿ.

1) 14ನೇ ವಿಧಿ – ಸಮಾನತೆಯ ಹಕ್ಕು

2) 200ನೇ ವಿಧಿ – ರಾಜ್ಯ ಮಸೂದೆಗಳು ರಾಷ್ಟ್ರಪತಿಗಳ ಪರಿಗಣನೆಗೆ ಕಾಯ್ದಿರಿಸಲಾಗುವುದು

3) 201ನೇ ವಿಧಿ – ರಾಜ್ಯದ ಮಸೂದೆಗಳಿಗೆ ಒಪ್ಪಿಗೆ ನೀಡುವ ಅಧಿಕಾರ

4) 213ನೇ ವಿಧಿ – ರಾಜ್ಯಪಾಲರ ಸುಗ್ರೀವಾಜ್ಞೆ ಮಾಡುವ ಅಧಿಕಾರ

ಮೇಲಿನ ಯಾವ ಜೋಡಿಗಳು ಸರಿಯಾಗಿ ಹೊಂದಾಣಿಕೆಯಾಗಿವೆ?

ಎ) 1 & 2 ಮಾತ್ರ ಬಿ) 2 & 3 ಮಾತ್ರ ಸಿ) 1 ಮತ್ತು 4 ಮಾತ್ರ ಡಿ) 1 ಮಾತ್ರ

14. ಪ್ರಧಾನ ಮಂತ್ರಿ ಆವಾಸ್ ಯೋಜನೆಗೆ ಸಂಬಂಧಿಸಿದಂತೆ, ಈ ಕೆಳಗಿನ ಯಾವ ಹೇಳಿಕೆಗಳು ತಪ್ಪಾಗಿದೆ?

1) ಇದು ಕೇಂದ್ರ ಪ್ರಾಯೋಜಿತ ಯೋಜನೆಯಾಗಿದ್ದು. 2016ರಲ್ಲಿ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು ಪ್ರಾರಂಭಿಸಿತು

2) ಇದು ಭಾರತದ ನಗರ ಮತ್ತು ಗ್ರಾಮೀಣ ಪ್ರದೇಶಗಳನ್ನು ಒಳಗೊಂಡಿದೆ

ಎ) 1 ಮಾತ್ರ ಬಿ) 2 ಮಾತ್ರ

ಸಿ) ಎರಡೂ ಸರಿ ಡಿ) ಎರಡೂ ತಪ್ಪಾಗಿವೆ

15. ಕೆಳಗಿನವುಗಳನ್ನು ಪರಿಗಣಿಸಿ.

1) ಬ್ರೆಜಿಲ್ 2) ಜರ್ಮನಿ 3) ಭಾರತ 4) ಜಪಾನ್

ಮೇಲಿನ ದೇಶಗಳಲ್ಲಿ ಯಾವುದು f–4 ರಾಷ್ಟ್ರಗಳಾಗಿವೆ?

ಎ) 1 & 3 ಮಾತ್ರ ಬಿ) 2 & 4 ಮಾತ್ರ ಸಿ) ಎಲ್ಲವೂ ಡಿ) 1, 2 & 3 ಮಾತ್ರ

ಮುಂದುವರಿಯುತ್ತದೆ...

Answers 11– ಬಿ, 12–ಡಿ, 13–ಸಿ, 14–ಎ, 15–ಸಿ.

ಪಾಟೀಲ್ಸ್ ಗುರುಕುಲ ಕರಿಯರ್ ಅಕಾಡೆಮಿ, ಧಾರವಾಡ. ಮೊ: 98804 17024

ಭೂಗೋಳಶಾಸ್ತ್ರ

327) ಅತಿ ಕಡಿಮೆ ಅರಣ್ಯ ಪ್ರದೇಶವನ್ನು ಹೊಂದಿರುವ ರಾಜ್ಯ ಯಾವುದು?

a) ರಾಜಸ್ಥಾನ b) ಹರಿಯಾಣ

c) ಅರುಣಾಚಲ ಪ್ರದೇಶ d) ಜಾರ್ಖಂಡ್

328) ಈ ಕೆಳಕಂಡ ಯಾವ ರಾಜ್ಯವು ಗರಿಷ್ಠ ಅರಣ್ಯ ಪ್ರದೇಶವನ್ನು ಹೊಂದಿದೆ?

a) ಮಧ್ಯಪ್ರದೇಶ b) ಆಂಧ್ರಪ್ರದೇಶ

c) ಉತ್ತರಪ್ರದೇಶ d) ಕೇರಳ

329) ಭಾರತದಲ್ಲಿ ಅತ್ಯಂತ ವಿಶಾಲವಾದ ಹುಲಿ ಅಭಯಾರಣ್ಯವನ್ನು ಹೊಂದಿರುವ ರಾಜ್ಯ ಯಾವುದು?

a) ಕರ್ನಾಟಕ b) ಪಶ್ಚಿಮ ಬಂಗಾಳ

c) ಆಂಧ್ರಪ್ರದೇಶ (ನಾಗಾರ್ಜುನ ಸಾಗರ–ಶ್ರೀಶೈಲಂ) d) ಗುಜರಾತ್

330) ಬಿಳಿಗಿರಿ ರಂಗಸ್ವಾಮಿ ಬೆಟ್ಟದಲ್ಲಿ ಸಂರಕ್ಷಿಸಲಾಗಿರುವ ಪ್ರಾಣಿ ಯಾವುದು?

a) ಹುಲಿ b) ಹಕ್ಕಿಗಳು

c) ಆನೆ d) ಸಿಂಹ

331) ಭಾರತದ ರಾಷ್ಟ್ರಪಕ್ಷಿ ಯಾವುದು?

a) ಗಿಳಿ b) ಗುಬ್ಬಚ್ಚಿ c) ಹಂಸ d) ನವಿಲು

332) ಭಾರತದಲ್ಲಿ 'ಪ್ರಾಜೆಕ್ಟ್ ಎಲಿಫೆಂಟ್' ಆರಂಭವಾದ ವರ್ಷ ಯಾವುದು?

a) 1965 b) 1980 c) 1992 d) 1995

333) ಕರ್ನಾಟಕದಲ್ಲಿ ಯಾವ ನದಿಯು ರಿವರ್ ರಾಫ್ಟಿಂಗ್ ಮಾಡಲು ಪ್ರಸಿದ್ಧಿಯಾಗಿದೆ?

a) ಕಾಳಿ ನದಿ b) ನೇತ್ರಾವತಿ

c) ಶರಾವತಿ d) ಹೇಮಾವತಿ

ಮುಂದುವರಿಯುತ್ತದೆ...

Answers 327-b, 328-a, 329-c, 330-a/c, 331 -d , 332-c, 333-a.

ಸಿದ್ದಲಿಂಗೇಶ್ವರ.ಮು. ಮುಳ್ಳಾಳ ಉಪನ್ಯಾಸಕರು, ಬೆಟಗೇರಿ–ಗದಗ ಮೊ: 9632808880

ಕೆ-ಸೆಟ್ ಸಾಮಾನ್ಯ ಪತ್ರಿಕೆ - ಬೋಧನಾ ಮತ್ತು ಸಂಶೋಧನಾ ಸಾಮರ್ಥ್ಯ

42. Read the following passage carefully and answer the questions 43 to 48:

It was eleven O'clock when Mr. Pontellier returned from his night out. He was in an excellent humour, in high spirits, and very talkative. His entrance awoke his wife, who was in bed and fast asleep. He talked to her while he undressed, telling her anecdotes and bits of news and gossip that he had gathered during the day. She was overcome with sleep, and answered him with little half utterances. He thought it very discouraging that his wife evinced so little interest in things which concerned him and valued so little his conversation. Mr. Pontellier had forgotten the bonbons and peanuts he had promised the boys. Not with standing, he loved them very much and went into the adjoining room where they slept to take a look at them and make sure that they were resting comfortably.

Mr. Pontellier returned to his wife with the information that Raoul had a high fever and needed looking after. Then he lit his cigar and went and sat near the open door to smoke

Mrs. Pontellier was quite sure Raoul had no fever. He had gone to bed perfectly well, she said and nothing had failed him all day. But he assured her the child was burning with fever at that moment. He reproached his wife with her inattention, her habitual neglect of the children. If it was not a mother's place to look after children, whose on earth was it? He himself had his hands full with his brokerage business. He could not be in two places at once. He talked in a monotonous, insistent way.

Mrs. Pontellier sprang out of bed and went into the next room. She came back and sat on the edge of the bed, leaving her head down on the pillow. She said nothing and refused to answer her husband. When his cigar was smoked out he went to bed and in half a minute was fast asleep.

Mrs. Pontellier was by that time thoroughly awake. She began to cry a little, and wiped her eyes on the sleeve of her night gown. She went out on the porch where she sat down in the wicker chair and began to rock gently to and fro. It was then past midnight. The collages were all dark. There was no sound except the hooting of an old owl and the everlasting voice of the sea, that broke like a mournful lullaby upon the night.

The tears came so fast to Mrs. Pontellier's eyes. She went on crying there. She could not have told why she was crying. Such experi ences as the foregoing were not uncommon in her married life. An indescribable sense of oppression filled her whole being. It was strange and unfamiliar; it was a mood. She did not sit there upbraiding her husband or lamenting at fate. She was just having a good cry all to herself. The mosqui toes succeeded in dispelling a mood which would have held her there for long. The following morning Mr. Pontellier was up in good time to take the carriage which was to convey him to the city. He was returning to the city, to his business. They would not see him again at home till the coming Saturday. He was eager to go, as he looked forward to a lively week in the financial centre.

ಮುಂದುವರಿಯುತ್ತದೆ...

ಅರವಿಂದ್ ಇಂಡಿಯಾ, ವಿಜಯನಗರ, ಬೆಂಗಳೂರು. ಮೊ: 99864 39874

ಭಾರತದ ವೃದ್ಧಪಿತಾಮಹ ದಾದಾಭಾಯಿ ನವರೋಜಿ



ದಕ್ಷಿಣ ಆಫ್ರಿಕಾದಲ್ಲಿದ್ದ ಸಂದರ್ಭದಲ್ಲಿ ನವರೋಜಿ ಅವರು ನನಗೆ ಸ್ಫೂರ್ತಿಯಾಗಿದ್ದರು ಮತ್ತು ಅಗತ್ಯವಾದ ಸಲಹೆಗಳನ್ನು ನೀಡುತ್ತಿದ್ದರು. ವಾರಕ್ಕೊಂದರಂತೆ ನಾನು ಅವರಿಗೆ ಪತ್ರ ಬರೆಯುವುದು ಸಾಮಾನ್ಯವಾಗಿತ್ತು... ಎಂದು ಸ್ವತಃ ಮಹಾತ್ಮ ಗಾಂಧೀಜಿ ಅವರೇ ಹೇಳಿಕೊಂಡ ಮೇರು ವ್ಯಕ್ತಿತ್ವ ದಾದಾಭಾಯಿ ನವರೋಜಿ ಅವರದು.

ಭಾರತದ ಸ್ವಾತಂತ್ರ್ಯ ಚಳವಳಿಯ ಬುನಾದಿಯನ್ನು ಆಂಗ್ಲರ ನೆಲದಲ್ಲಿ ನಿಂತೇ ಹದಗೊಳಿಸಿದ ಅಪೂರ್ವ ಚೇತನ ದಾದಾಭಾಯಿ ನವರೋಜಿ. ಮಹಾತ್ಮ ಗಾಂಧೀಜಿಗೆ ಗುರುವಿನ ಸ್ಥಾನದಲ್ಲಿದ್ದವರು ನವರೋಜಿ... ಭಾರತದಿಂದ ಇಂಗ್ಲೆಂಡಿಗೆ ವ್ಯಾಸಂಗಕ್ಕೆಂದು ಹೋಗುತ್ತಿದ್ದ ವಿದ್ಯಾರ್ಥಿಗಳಿಗೆ ಭರವಸೆಯಾಗಿ, ಕಷ್ಟಗಳಿಗೆ ಸ್ಪಂದಿಸುವ ತಂದೆಯಾಗಿ, ಭಾರತ ಹಾಗೂ ಇಂಗ್ಲೆಂಡ್ ನಡುವಿನ ಕೊಂಡಿಯಾಗಿ ಇದ್ದವರು 'ದಿ ಗ್ರಾಂಡ್ ಓಲ್ಡ್ ಮ್ಯಾನ್ ಆಫ್ ಇಂಡಿಯಾ' ಎಂದು ಕರೆಸಿಕೊಂಡ ದಾದಾಭಾಯಿ ನವರೋಜಿ.

ಸೆಪ್ಟೆಂಬರ್ 04, 1825ರಂದು ಮುಂಬೈನ ಫಾರ್ಸಿ ಕುಟುಂಬದಲ್ಲಿ ಜನಿಸಿದ ದಾದಾಭಾಯಿ ಅವರಿಗೆ ವಿದ್ಯಾರ್ಥಿ ದೆಸೆಯಲ್ಲಿ ವಿವಿಧ ಜನಾಂಗಗಳು, ಭಾಷಿಕರು, ವರ್ತಕರ ಒಡನಾಟ ದೊರಕಿತು. ವ್ಯಾಸಂಗದ ಬಳಿಕ ಎಲ್ಫಿನಸ್ಟೋನ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ನೇಮಕಗೊಂಡರು. ಪ್ರತಿಷ್ಠಿತ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ನೇಮಕಗೊಂಡ ಭಾರತೀಯರ ಪೈಕಿ ನವರೋಜಿ ಮೊದಲಿಗರು. ಸಮಾನ ಮಯಸ್ಕರನ್ನು ಸಂಘಟಿಸಿ ಸಾಮಾಜಿಕ ಕೈಂಕರ್ಯಗಳಲ್ಲಿ ತೊಡಗಿಕೊಂಡಿದ್ದ ಅವರು, ಫಾರ್ಸಿ ಸಮುದಾಯವನ್ನು ಸಾಂಪ್ರದಾಯಿಕತೆ ಇಂದ ಮುಕ್ತಗೊಳಿಸಲು ಪ್ರಯತ್ನಿಸಿದರು. ಮನೆ ಮನೆಗೆ ತೆರಳಿ ಶಿಕ್ಷಣದ ಮಹತ್ವವನ್ನು ಸಾರಿದರು. ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಸಂಸ್ಥೆಗಳನ್ನು ಹುಟ್ಟು ಹಾಕಿದರು. 1849ರಲ್ಲಿ ಐದು ಶಾಲೆಗಳನ್ನು ಬಾಲಕಿಯರಿಗಾಗಿ ತೆರೆದರು. ಆಗ ಅವರಿಗೆ 24 ವರ್ಷ.

'ರಾಸ್ಟ್ ಗೋಪ್ತಾರ್'(ಟ್ರೂತ್ ಟೆಲ್ಲರ್) ಎಂಬ ಉಚಿತ ಪಾಕ್ಷಿಕವನ್ನು ಆರಂಭಿಸಿದ ನವರೋಜಿ, ಸಮಾಜ ಹಾಗೂ ಮತೀಯ ಸುಧಾರಣೆಗಳ ಅವಶ್ಯಕತೆ ಹಾಗೂ ನಾಗರಿಕರ ಕರ್ತವ್ಯ ಕುರಿತು ಜನರನ್ನು ಜಾಗೃತಗೊಳಿಸಲು ಪ್ರಯತ್ನಿಸಿದರು. ಜನಮನ್ನಣೆಯಿಂದಾಗಿ ಪಾಕ್ಷಿಕವನ್ನು ವಾರಪತ್ರಿಕೆಯನ್ನಾಗಿ ಬದಲಾಯಿಸಲಾಯಿತು.

1855ರಲ್ಲಿ ಕಾಮಾ ಕುಟುಂಬದವರು ಲಂಡನ್‌ನಲ್ಲಿ ಭಾರತೀಯರ ಮೊದಲ ವ್ಯಾಪಾರಿ ಸಂಸ್ಥೆಯನ್ನು ಸ್ಥಾಪಿಸಿದಾಗ ಅದರ ಪಾಲುದಾರರಾಗಿ ನವರೋಜಿ ಲಂಡನ್‌ಗೆ ತೆರಳಿದರು. ಅದೊಂದು ಸಂಕ್ರಮಣ ಕಾಲ. ಗ್ಲಾಡಸ್ಟೋನ್, ಕೋಬಡನ್ ರೀತಿಯ ನಾಯಕರು ಬ್ರಿಟನ್‌ನಲ್ಲಿ ಉದಾರೀಕರಣದ ಕುರಿತು ಚರ್ಚೆ ಹುಟ್ಟುಹಾಕಿದ್ದರು. ಹರ್ಬರ್ಟ್ ಸ್ಪೆನ್ಸರ್, ಮಿಲ್ ಹಾಗೂ ಥಾಮಸ್ ಕ್ಯಾರ್ಲಿಲ್ ಸಮಾಜ ಪುನರಚನೆಯ ಸಿದ್ಧಾಂತವನ್ನು ಮರು ವ್ಯಾಖ್ಯಾನಿಸಿದ್ದರು. ದಾದಾಭಾಯಿಯವರ ರಾಜಕೀಯ ಪ್ರಜ್ಞೆ ಪಕ್ವಗೊಂಡಿತು. ಪ್ರಜಾಸತ್ತಾತ್ಮಕ ಸಂಸ್ಥೆಗಳು ಹಾಗೂ ಸಂಸತ್ತು ಹೇಗೆ ಕಾರ್ಯನಿರ್ವಹಿಸುತ್ತದೆ ಎನ್ನುವುದನ್ನು ಅವರು ಅಭ್ಯಾಸ ಮಾಡಿದರು.

ಸ್ಫೂರ್ತಿ ಚೇತನ

ತೌಸೀಫ್ ಜೆ ಕಲ್ಮನಿ

ಕೂಬಿಹಾಳ, ಧಾರವಾಡ

ನವರೋಜಿಯವರ ಹಾದಿ ಸ್ಪಷ್ಟಗೊಂಡಿತು. 'ಭಾರತೀಯರಿಗಾಗಿ ಭಾರತ' ಎನ್ನುವುದನ್ನು ಬಲವಾಗಿ ಪ್ರತಿಪಾದಿಸುವುದು. ಭಾರತದಲ್ಲಿನ ಬ್ರಿಟಿಷ್ ಆಳ್ವಿಕೆಯ ಮಾದರಿಯನ್ನು ಬ್ರಿಟಿಷ್ ನಾಗರಿಕರಿಗೆ ಪರಿಚಯ ಮಾಡಿಕೊಡುವುದು. ನಾಗರಿಕ ಸೇವೆಗಳಿಗೆ ಸೇರಲು ಲಂಡನ್‌ಗೆ ಬರುವ ಭಾರತದ ವಿದ್ಯಾರ್ಥಿಗಳಿಗೆ ಆಸರೆಯಾಗುವುದು ದಾದಾಭಾಯಿಯವರ ಗುರಿಯಾಗಿತ್ತು.

1856ರಲ್ಲಿ ಲಂಡನ್‌ನ ಯೂನಿವರ್ಸಿಟಿ ಕಾಲೇಜಿನಲ್ಲಿ ಗುಜರಾತಿ ಭಾಷೆಯ ಪ್ರಾಧ್ಯಾಪಕರಾಗಿ ನೇಮಕಗೊಂಡರು. ನವರೋಜಿ 1865ರಲ್ಲಿ 'ಲಂಡನ್ ಇಂಡಿಯನ್ ಸೊಸೈಟಿ'ಯನ್ನು ಆರಂಭಿಸಿದರು. ಭಾರತೀಯ ದೃಷ್ಟಿಕೋನವನ್ನು ಬ್ರಿಟಿಷ್ ನಾಗರಿಕರ ಮುಂದೆ ಮಂಡಿಸಲು 'ಈಸ್ಟ್ ಇಂಡಿಯಾ ಅಸೋಸಿಯೇಷನ್' 1866ರಲ್ಲಿ ಅಸ್ತಿತ್ವಕ್ಕೆ ಬಂದಿತು. ಈ ವೇದಿಕೆಯನ್ನು ಬಳಸಿಕೊಂಡ ನವರೋಜಿ 1867ರಲ್ಲಿ 'ಇಂಗ್ಲೆಂಡ್ ಡ್ಯೂಟೀಸ್ ಟು ಇಂಡಿಯಾ' ಎಂಬ ವಿಷಯದ ಮೇಲೆ ವಿಚಾರ ಮಂಡಿಸಿದರು. ಭಾರತದ ಸಂಪತ್ತು ಹೇಗೆ ಇಂಗ್ಲೆಂಡಿಗೆ ಹೇಗೆ ಹರಿದು ಬರುತ್ತಿದೆ ಹಾಗೂ ಭಾರತೀಯರನ್ನು ಹೇಗೆ ಆಡಳಿತ ವ್ಯವಸ್ಥೆಯಿಂದ ಹೊರಗಿಡುವ ಪ್ರಯತ್ನಗಳು ನಡೆಯುತ್ತಿವೆ ಎನ್ನುವುದನ್ನು ವಿವರಿಸಿದರು.

ಭಾರತದ ಆಡಳಿತ ಸೇವೆಯಲ್ಲಿ ಭಾರತೀಯರು ಹೆಚ್ಚು ಸ್ಥಾನ ಪಡೆಯಬೇಕು. ಆಗಷ್ಟೇ ಭಾರತದ ಜನರ ಸಂಕಷ್ಟಗಳಿಗೆ ಪರಿಹಾರ ಒದಗಿಸಲು, ಸಂಪತ್ತಿನ ಸೋರಿಕೆಯನ್ನು ತಡೆಯಲು ಸಾಧ್ಯ ಎನ್ನುವುದು ನವರೋಜಿಯವರ ನಿಲುವಾಗಿತ್ತು.

ನಾಗರಿಕ ಸೇವಾ ಪರೀಕ್ಷೆಗಳಲ್ಲಿ ಭಾರತೀಯ ವಿದ್ಯಾರ್ಥಿಗಳಿಗೆ ಸಮಾನ ಅವಕಾಶ ಸಿಗಬೇಕು ಎಂದು ಆಗ್ರಹಿಸಿದರು. 1873ರಲ್ಲಿ ಭಾರತಕ್ಕೆ ಹಿಂದಿರುಗಿದ ನವರೋಜಿ, 1874ರಲ್ಲಿ ಬರೋಡಾದ ದಿವಾನರಾದರು.ಬಾಂಬೆಯ ಶಾಸಕಾಂಗ ಪರಿಷತ್ತಿನ ಸದಸ್ಯರಾದರು.ಮೂರು ಸಂದರ್ಭಗಳಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದ ನವರೋಜಿಯವರು 1892ರಲ್ಲಿ ಬ್ರಿಟಿಷ್ ಸಂಸತ್ತನ್ನು ಪ್ರವೇಶಿಸಿದರು. ಬ್ರಿಟಿಷ್ ಸಂಸತ್ತು ಪ್ರವೇಶಿಸಿದ ಏಷ್ಯಾದ ಮೊದಲಿಗ ಎನಿಸಿಕೊಂಡರು.

ಸಂಪತ್ತಿನ ಸೋರಿಕೆ

ಭಾರತದ ಸಂಪತ್ತು ಮತ್ತು ಸಂಪನ್ಮೂಲಗಳು ಯಾವುದೇ ಆರ್ಥಿಕ ಮತ್ತು ವಸ್ತು ರೂಪದ ಸಮಾನ ಆದಾಯ ಅಥವಾ ಲಾಭವಿಲ್ಲದೇ ಇಂಗ್ಲೆಂಡಿಗೆ ಹರಿದು ಹೊದದ್ದನ್ನು 'ಸಂಪತ್ತಿನ ಸೋರಿಕೆ' ಎಂದು ಕರೆಯಲಾಗಿದೆ. ದಾದಾಭಾಯಿ ನವರೋಜಿಯವರು 'ಪಾವರ್ಟಿ ಅಂಡ್ ಅನ್ ಬ್ರಿಟಿಷ್ ರೂಲ್ ಇನ್ ಇಂಡಿಯಾ' ಎಂಬ ಕೃತಿಯಲ್ಲಿ ಸೋರಿಕೆ ಸಿದ್ಧಾಂತವನ್ನು ಮಂಡಿಸಿದ್ದಾರೆ. ಇವರು ಭಾಷಣ ಹಾಗೂ ಪತ್ರಿಕಾ ಮಾಧ್ಯಮದ ಮೂಲಕ ಸಾರ್ವಜನಿಕರಿಗೆ ತಿಳುವಳಿಕೆ ಮೂಡಿಸಲು ಒಂದು ಆಂದೋಲನವನ್ನೇ ನಡೆಸಿದರು.ಭಾರತದ ಬಡತನಕ್ಕೆ ಸಂಪತ್ತಿನ ಸೋರಿಕೆ ಮತ್ತು ಬ್ರಿಟಿಷರ ದುರಾಡಳಿತವೇ ಮೂಲಕಾರಣವೆಂದು ಘೋಷಿಸಿದರು. ಮುಂದೆ ರಾಷ್ಟ್ರೀಯವಾದಿಗಳು ಸೋರಿಕೆ ಸಿದ್ಧಾಂತ ಮತ್ತು ಬ್ರಿಟಿಷರ ಆರ್ಥಿಕ ಶೋಷಣೆಯನ್ನು ಅಸ್ತ್ರವನ್ನಾಗಿಸಿಕೊಂಡು ಜನರನ್ನು ಬ್ರಿಟಿಷ್ ಆಳ್ವಿಕೆಯ ವಿರುದ್ಧ ಜಾಗೃತಗೊಳಿಸಿದರು.

'ಹೋಮ್ ರೂಲ್' ಪ್ರತಿಪಾದಕರಾಗಿದ್ದ ನವರೋಜಿ ಬ್ರಿಟಿಷ್ ಆಡಳಿತವನ್ನು ಖಂಡಿಸುತ್ತ ಅಪ್ಪಟ ರಾಷ್ಟ್ರವಾದಿಯಾಗಿ, ಮಂದಗಾಮಿ ನಾಯಕನಾಗಿ, ಗೋಪಾಲಕೃಷ್ಣ ಗೋಖಲೆ ಹಾಗೂ ಗಾಂಧೀಜಿ ಸೇರಿದಂತೆ ಅನೇಕ ನಾಯಕರಿಗೆ ಗುರುಸ್ಥಾನದಲ್ಲಿ ಇದ್ದರು.

ಭಾರತ ಬ್ರಿಟಿಷರ ಆಡಳಿತಕ್ಕೆ ಒಳಪಟ್ಟ ದಿನಗಳಲ್ಲಿ ಆಂಗ್ಲರ ನಾಡಿನಲ್ಲಿ ಭಾರತದ ಪತಾಕೆಯಾದರು.ಭಾರತದ ರಾಯಭಾರಿಯಾಗಿ ಇಂಗ್ಲೆಂಡನಲ್ಲಿ ಭಾರತದ ಪರ ಕೆಲಸ ಮಾಡಿದ,ಭಾರತದ ಸ್ವಾತಂತ್ರ್ಯ ಚಳುವಳಿಗೆ ಶಂಖನಾದ ಮೊಳಗಿಸಿದ ನವರೋಜಿಯವರು ಸದಾ ಪ್ರಾತ:ಸ್ಮರಣಿಯರು.

ಐಎಮ್ಯು ಬ್ರೇಕೌಟ್ ಸ್ನಾತಕೋತ್ತರ ಫೆಲೋಶಿಪ್ 2026

ಗಣಿತ ಕ್ಷೇತ್ರದಲ್ಲಿ ಉನ್ನತ ಸಾಧನೆ ಮಾಡಬೇಕೆಂಬ ಕನಸು ಹೊತ್ತಿರುವ ವಿದ್ಯಾರ್ಥಿಗಳಿಗೆ ಅಂತಾರಾಷ್ಟ್ರೀಯ ಗಣಿತ ಸಂಘ (IMU) ಒಂದು ಅದ್ಭುತ ಅವಕಾಶವನ್ನು ಕಲ್ಪಿಸಿದೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಪ್ರತಿಭಾವಂತ ಸಂಶೋಧನಾ ವಿದ್ಯಾರ್ಥಿಗಳನ್ನು ಉತ್ತೇಜಿಸಲು 'ಐಎಮ್ಯು ಬ್ರೇಕೌಟ್ ಸ್ನಾತಕೋತ್ತರ ಫೆಲೋಶಿಪ್ ಕಾರ್ಯಕ್ರಮ 2026' ಅಡಿಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಈ ಫೆಲೋಶಿಪ್‌ನ ಮುಖ್ಯ ಗುರಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಗಣಿತ ವಿದ್ಯಾರ್ಥಿಗಳು ತಮ್ಮದೇ ದೇಶದಲ್ಲಿ ಅಥವಾ ಇನ್ನೊಂದು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರದಲ್ಲಿ ಡಾಕ್ಟರಲ್ (Ph.D.) ಪದವಿಯನ್ನು ಪೂರ್ಣಗೊಳಿಸಲು ಆರ್ಥಿಕ ನೆರವು ನೀಡುವುದಾಗಿದೆ.

ಪ್ರತಿಭಾವಂತ ಗಣಿತ ವಿದ್ಯಾರ್ಥಿಗಳಿಗೊಂದು ಸುವರ್ಣಾವಕಾಶ

ಶಿಷ್ಯವೇತನ

ಯಾರು ಅರ್ಜಿ ಸಲ್ಲಿಸಬಹುದು?

- ಅಂತಾರಾಷ್ಟ್ರೀಯ ಗಣಿತ ಸಂಘವು (IMU) ಪಟ್ಟಿ ಮಾಡಿರುವ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ನಿವಾಸಿಗಳು ಅಥವಾ ನಾಗರಿಕರು ಈ ಫೆಲೋಶಿಪ್‌ಗೆ ಅರ್ಹರು.
- ಅಭ್ಯರ್ಥಿಗಳು ಮಾನ್ಯತೆ ಪಡೆದ ವಿಶ್ವವಿದ್ಯಾಲಯ ಅಥವಾ ಸಂಶೋಧನಾ ಸಂಸ್ಥೆಯಲ್ಲಿ ಡಾಕ್ಟರಲ್ ಕಾರ್ಯಕ್ರಮಕ್ಕೆ ದಾಖಲಾಗಿರಬೇಕು ಅಥವಾ ಪ್ರವೇಶದ ಭರವಸೆ ಹೊಂದಿರಬೇಕು.
- ಗಣಿತ ವಿಜ್ಞಾನದಲ್ಲಿ ಬಲವಾದ ಶೈಕ್ಷಣಿಕ ಹಿನ್ನೆಲೆ ಇರಬೇಕು.
- ಸಂಶೋಧನೆ ಮತ್ತು ಉಪನ್ಯಾಸ ವೃತ್ತಿಯಲ್ಲಿ ಆಸಕ್ತಿ ಇರಬೇಕು ಹಾಗೂ ಮಾರ್ಗದರ್ಶಕರ (Thesis Advisor) ಅಡಿಯಲ್ಲಿ ಸ್ಪಷ್ಟ ಸಂಶೋಧನಾ ಯೋಜನೆಯನ್ನು ಹೊಂದಿರಬೇಕು.

ಫೆಲೋಶಿಪ್ ಸೌಲಭ್ಯಗಳು: ಆಯ್ಕೆಯಾದ ಅಭ್ಯರ್ಥಿಗಳಿಗೆ ಒಂದು ವರ್ಷಕ್ಕೆ ಗರಿಷ್ಠ $10,000 (ಅಂದಾಜು 8.3 ಲಕ್ಷ ರೂಪಾಯಿಗಳು) ವರೆಗೆ ಫೆಲೋಶಿಪ್ ಮೊತ್ತ ಮತ್ತು ಇತರ ಶೈಕ್ಷಣಿಕ ಪ್ರಯೋಜನಗಳು ದೊರೆಯಲಿವೆ. ಗಣಿತದಲ್ಲಿ ಸಂಶೋಧನೆ ನಡೆಸಿ ದೇಶದ ಶೈಕ್ಷಣಿಕ ಪ್ರಗತಿಗೆ ಕೊಡುಗೆ ನೀಡಬಯಸುವ ವಿದ್ಯಾರ್ಥಿಗಳು ಈ ಜಾಗತಿಕ ವೇದಿಕೆಯನ್ನು ಸದುಪಯೋಗಪಡಿಸಿಕೊಳ್ಳಬಹುದು.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 30 ಮೇ 2026

ಹೆಚ್ಚಿನ ಮಾಹಿತಿಗಾಗಿ : [www.b4s.in/saka/IMBF2] (http://www.b4s.in/saka/IMBF2)

ದಿನಕ್ಕೊಂದು ಶ್ಲೋಕಾಭ್ಯಾಸ

ಶ್ಲೋಕಾಭ್ಯಾಸ

ಮೇಧಾ ಪ್ರಹ್ಲಾದಾಚಾರ್ಯ ಜೋಶಿ, ಬೆಂಗಳೂರು

ಭಜಗೋವಿಂದಂ

27. ರಥ್ಯಾಕರ್ಪಟ-ವಿರಚಿತಕಂಥಃ
ಪುಣ್ಯಾಪುಣ್ಯ ವಿವರ್ಜಿತಪಂಥಃ।
ಯೋಗೀ ಯೋಗನಿಯೋಜಿತ ಚಿತ್ತಃ
ರಮತೇ ಬಾಲೋನ್ಮತ್ತವದೇವ ॥

ಅರ್ಥ: ರಥ್ಯಾಕರ್ಪಟ– ವಿರಚಿತಕಂಥಃ – ಬೀದಿಯಲ್ಲಿ ಬಿದ್ದ ಹರಕು ಬಟ್ಟೆಯನ್ನು ಉಟ್ಟವನು

ಪುಣ್ಯಾಪುಣ್ಯವಿವರ್ಜಿತಪಂಥಃ– ಪುಣ್ಯ–ಪಾಪಗಳ ಹಾದಿಯನ್ನು ತೋರೆದವನು

ಯೋಗೀ ಯೋಗನಿಯೋಜಿತ ಚಿತ್ತಃ – ಧ್ಯಾನಯೋಗದಲ್ಲಿಯೇ ಮನಸ್ಸನ್ನು ಹೊಂದಿದವನು

ರಮತೇ ಬಾಲೋನ್ಮತ್ತವದೇವ – ಯಾರ ಅಂಜಿಕೆಯೂ ಇಲ್ಲದ ಉನ್ಮತ್ತ ಬಾಲಕನಂತಾಡುವನು.

ತಾತ್ಪರ್ಯ: ಈ ಶ್ಲೋಕದಲ್ಲಿ ಶ್ರೀಶಂಕರಾಚಾರ್ಯರು ನಿಜವಾದ ಬ್ರಹ್ಮಜ್ಞಾನಿಯ ಲಕ್ಷಣಗಳನ್ನು ವಿವರಿಸಿದ್ದಾರೆ.
ನಿಜವಾಗಿ ಭಗವಂತನಲ್ಲಿ ಮನಸ್ಸಿಟ್ಟ ಯೋಗಿಗೆ ದುಬಾರಿಯಾದ ಸುಂದರ ಬಟ್ಟೆಗಳ ಇಚ್ಛೆಯೇ ಇರುವುದಿಲ್ಲ. ಕೇವಲ ದೇಹವನ್ನು ಮರೆಮಾಚುವಷ್ಟು ತುಂಡು ಹರಕಲು ಬಟ್ಟೆಯಾದರೂ ಸರಿ ಹೊದ್ದುಕೊಂಡುಬಿಡುವ. ಸಂಗ್ರಹ ಬುದ್ಧಿ ಇಲ್ಲದೇ ಭಿಕ್ಷೆ ಬೇಡಿ ಆ ಸಮಯಕ್ಕೆ ತನ್ನ ಹೊಟ್ಟೆ ತುಂಬಿಸಿಕೊಳ್ಳುತ್ತಾನೆ. ಪುಣ್ಯಕ್ಕಾಗಿ ಅನೇಕ ಕರ್ಮಗಳನ್ನು ಮಾಡಬೇಕು ಅಥವಾ ಪಾಪ ಕಳೆಯಲು ಇನ್ನೇನೋ ಪ್ರಾಯಶ್ಚಿತ್ತ ಮಾಡಬೇಕು ಎಂಬ ದ್ವಂದ್ವಗಳಿಂದ ದೂರವಾಗಿರುತ್ತಾನೆ. ಎಲ್ಲವೂ ಭಗವಂತನ ಪ್ರೇರಣೆಯಿಂದಲೇ ಆಗುವುದು ಎಂಬ ಜ್ಞಾನದಿಂದ ಪರಿಪೂರ್ಣನಾಗಿರುತ್ತಾನೆ. ಗತಕಾಲದ ಅನುತಾಪಗಳನ್ನು ವರ್ತಮಾನಕ್ಕೆ ತರುವುದಿಲ್ಲ. ಭವಿಷ್ಯದ ಕಾತರತೆಯೂ ಅವನಲ್ಲಿ ಇರುವುದಿಲ್ಲ. ಮನಸ್ಸು ಪೂರ್ತಿಯಾಗಿ ಭಗವನ್ಮಯವಾದಾಗ ಅನ್ಯ ಸಾಂಸಾರಿಕ ವಿಷಯಗಳಿಗೆ ಮನಸ್ಸು–ಬುದ್ಧಿಗಳಲ್ಲಿ ಸ್ಥಾನವೇ ಇರುವುದಿಲ್ಲ.

'ಯುಂಜನ್ನೇವಂ ಸದಾತ್ಮಾನಂ ಯೋಗೀ ನಿಯತಮಾನಸಃ। ಶಾಂತಿಂ ನಿರ್ವಾಣಪರಮಾಂ ಮತ್ಸಂಸ್ಥಾಂ ಅಧಿಗಚ್ಛತಿ'– ಎಂದು ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಹೇಳಿದಂತೆ, ಜ್ಞಾನಿಯಾದವನ ಮನಸ್ಸು ಸದಾ ಬ್ರಹ್ಮಮಯವಾಗಿ ಆನಂದ ಪರಾಯಣನಾಗಿರುತ್ತಾನೆ. ಅಂತಹ ಯೋಗಿಯನ್ನು ಯಾರ ಭಯವಿಲ್ಲದ ಉನ್ಮತ್ತ ಬಾಲಕನಂತೆ ಎಂದು ಶ್ರೀಶಂಕರಾಚಾರ್ಯರು ಹೋಲಿಸಿದ್ದಾರೆ. ಇಂತಹ ಬ್ರಹ್ಮಜ್ಞಾನಿಯ ಅವಸ್ಥೆಯನ್ನೇ ಪುರಂದರದಾಸರು "ಹುಚ್ಚು ಹಿಡಿಯಿತು ಎನಗೆ ಹುಚ್ಚು ಹಿಡಿಯಿತು. ಅಚ್ಯುತನ ಧ್ಯಾನವೆಂಬೋ ಅಚ್ಚು ಮೆಚ್ಚು ತಲೆಗೆ ಏರಿ" ಎಂದು ಹೇಳಿಕೊಂಡಿದ್ದಾರೆ. ಇಂತಹ ಮನಸ್ಥಿತಿಗಾಗಿ ಸದಾ ಗೋವಿಂದನನ್ನು ಭಜಿಸು.

ನಾಯಿ ಕಳ್ಳರ ಜಾಡು ಹಿಡಿಯುವುದು ಹೇಗೆ?

ನಾಯಿಗಳಿಗೆ ಸೂಕ್ಷ್ಮ ಶ್ರವಣ ಶಕ್ತಿ ಮತ್ತು ವಾಸನೆ ಕಂಡು ಹಿಡಿಯುವ ಶಕ್ತಿ ಇದೆ. ವ್ಯಕ್ತಿ ತನ್ನ ಸ್ನೇಹಿತನೇ ಅಥವಾ ಶತ್ರುವೇ ಎಂದು ನಾಯಿ ಗುರುತಿಸುವುದು ವಾಸನೆಯ ಮೂಲಕ. ಅವು ತಮ್ಮ ಗಡಿಯನ್ನು ಮೂತ್ರ ಬಳಸಿ ಗುರುತಿಸಿಕೊಳ್ಳುತ್ತವೆ.

ಪ್ರತಿ ಮನುಷ್ಯನಿಗೂ ಆತನದೇ ಆದ ವೈಯಕ್ತಿಕ ವಾಸನೆಯೊಂದಿದೆ. ಆದರೆ ಆತ ಅದನ್ನು ಗುರುತಿಸಲಾರ. ವ್ಯಕ್ತಿಯ ದೇಹ ಸೂಸುವ ವಾಸನೆಗೆ ಆತ ಬಳಸುವ ಆಹಾರ ಹಾಗೂ ಚಯಾಪಚಯ ಕ್ರಿಯೆ ಕಾರಣ. ನಾಯಿ ಈ ವಾಸನೆಯನ್ನು ಗುರುತಿಸಬಲ್ಲದು. ವಾಸನೆಯನ್ನು ಗುರುತಿಸುತ್ತಾ ಬಹುದೂರ ಹೋಗಬಲ್ಲದು. ಬ್ಲಡ್ ಹೌಂಡ್, ಜರ್ಮನ್ ಶೆಫರ್ಡ ಹಾಗೂ ಬೀಗಲ್‌ಗಳು ಈ ಪತ್ತೆ ಕಾರ್ಯದಲ್ಲಿ ಪ್ರಸಿದ್ಧಿ.

ಸಮುದ್ರದಲ್ಲಿ ಪ್ರವಾಹ ಬರುವುದಿಲ್ಲವೇಕೆ?

ಜಗತ್ತಿನ ನದಿ ಕೆರೆ ಸಮುದ್ರಗಳಲ್ಲಿರುವ ಒಟ್ಟಾರೆ ನೀರಿನ ಪ್ರಮಾಣ ಹೆಚ್ಚು ಕಡಿಮೆ ಒಂದೇ ಸಮನೇ ಇರುತ್ತದೆ. ಆದರೆ ಇದರ ಹಂಚಿಕೆ ಬದಲಾಗುತಿರುತ್ತದೆ. ನೀರನ್ನು ಸೂರ್ಯ ಆವಿಯಾಗಿಸುತ್ತಾನೆ. ಆವಿ ಮೋಡವಾಗಿ ಮಳೆ ಸುರಿದು ಮಳೆಯ ಶೇ. 75ರಷ್ಟು ಭಾಗ ಸಮುದ್ರ ಸೇರುತ್ತದೆ. ಉಳಿದದ್ದು ನೆಲದ ಮೇಲೆ ಬೀಳುತ್ತದೆ. ಇದರಲ್ಲಿ ಕೆಲ ಭಾಗ ಭೂಮಿಯೊಳಗೆ ಇಂಗಿಗರೆ ಉಳಿದದ್ದು ನದಿ ಮೂಲಕ ಸಮುದ್ರ ಸೇರುತ್ತದೆ. ಸಮುದ್ರ ಸೇರುವ ನೀರು ಹಾಗೂ ಆವಿಯಾಗುವ ನೀರು ಸದಾ ಸಮತೋಲನದಲ್ಲಿರುತ್ತದೆ. ಇದರಿಂದಾಗಿ ನಾವು ಸಮುದ್ರದಲ್ಲಿ ಪ್ರವಾಹವನ್ನು ಕಾಣಲಾರೆವು.

ಭೋಜರಾಜ ಸೊಪ್ಪಿಮಠ

ಉಪನ್ಯಾಸಕರು